ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 30 | ಜುಲೈ 27, 1980 | ಬೆಲೆ : 50 ಪೈಸೆ

ಭುಗಿಲೆದ್ದ ಅತೃಪ್ತಿ

ಜುಲೈ 20ನೇ ಸೋಮವಾರ ಧಾರವಾಡ ಜಿಲ್ಲೆಯ ನರಗುಂದ, ನವಲಗುಂದ ಮತ್ತು ಗದಗ್‌ಗಳಲ್ಲೂ, ಮತ್ತು ಬೆಳಗಾವಿ ಜಿಲ್ಲೆಯ ಸೌಂದತ್ತಿಯಲ್ಲೂ ನಡೆದ ರೈತರ ಮತ್ತು ಜನತೆಯ ಪ್ರತಿಭಟನೆ ಮತ್ತು ಪೋಲೀಸು ಗೋಲೀಬಾರ್-ಘಟನೆಗಳ ಪರಿಣಾಮ ಅಂದು ನಾಲ್ಕು ಮಂದಿಯ ಸಾವು, ಆಮೇಲೆ ಮತ್ತೊಂದು ಸಾವು, ಇದಾದ ಮೇಲೆ 23ರಂದು ನರೆಗಲ್ಲಿನಲ್ಲಿ ಪೋಲೀಸು ಗೋಲೀಬಾರಿನಿಂದ ಮತ್ತೂ ಒಂದು ಸಾವು, ಇದರೊಂದಿಗೆ ಇನ್ನೆಷ್ಟೋ ಮಂದಿಗೆ ತೀವ್ರಗಾಯ, ಸ್ವತ್ತುಗಳ ಹಾನಿ-ಇವೆಲ್ಲಾ ಜನತೆಯ ಅತೃಪ್ತಿ ಭುಗಿಲೆದ್ದಿರುವುದನ್ನು ತೋರಿಸುತ್ತಿದೆ.

ಮಲಪ್ರಭಾ ನೀರಾವರಿ ಯೋಜನೆಯಿಂದ ಪ್ರಯೋಜನ ಪಡೆಯುವ ಧಾರವಾಡ ಜಿಲ್ಲೆಯ ನರಗುಂದ, ನವಲಗುಂದ ಮತ್ತು ಬೆಳಗಾವಿ ಜಿಲ್ಲೆಯ ಸೌಂದತ್ತಿಯ ರೈತರು ಕಳೆದೆರಡು ವರ್ಷಗಳಿಂದಲೂ ನೀರಾವರಿ ತೆರಿಗೆ, ಬೆಟರ್‌ಮೆಂಟ್ ಲೆವಿಗಳನ್ನು ಇಳಿಸಬೇಕೆಂದೂ, ರೈತರು ಕೊಳ್ಳುವ ಗೊಬ್ಬರದಂತಹ ವಸ್ತುಗಳ ಬೆಲೆ ಇಳಿಸಬೇಕೆಂದೂ ಹೋರಾಡುತ್ತಾ ಬಂದಿರುವರು. ನರಗುಂದದಲ್ಲಿ ಸುಮಾರು ಎರಡು ತಿಂಗಳ ಹಿಂದೆ ಮುಖ್ಯ

ಸಂಪಾದಕೀಯ

ಮಂತ್ರಿಯವರ ವಿರುದ್ಧ ಸುಮಾರು 2000 ರೈತರು ಪ್ರತಿಭಟನೆ ಮಾಡಿದ್ದರು. ಕರ್ನಾಟಕ ಪ್ರಾಂತ ರೈತಸಂಘದ ಧಾರವಾಡ ಜಿಲ್ಲಾ ಘಟಕವೂ ಇದರಲ್ಲಿ ಸಕ್ರಿಯವಾಗಿ ಭಾಗವಹಿಸಿತ್ತು. ಈ ಪ್ರದೇಶದ ಎಲ್ಲಾ ರೈತರ ಹೋರಾಟವನ್ನು ಒಂದಾಗಿ ನಡೆಸಲು ಸಮನ್ವಯ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು 21 ರಂದು ಸೌಂದತ್ತಿ, ನರಗುಂದ, ನವಲಗುಂದಗಳಲ್ಲಿ ಬಂದ್ ಕಾರ್ಯಾಚರಣೆಗೆ ಕರೆ ಇತ್ತಿತು. ಗದಗದಲ್ಲಿ ಬೆಲೆಏರಿಕೆ ವಿರುದ್ಧ ಬಂದ್‌ಗೆ ಕರೆ ಈಯಲಾಗಿತ್ತು.

ಸರಕಾರ ಮತ್ತು ಅಧಿಕಾರಿಗಳು ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಮತ್ತು ನಿರ್ಣಯಗಳ ಜಾರಿಮಾಡುವುದರಲ್ಲಿ ತೋರಿಸುವ ಅಸಡ್ಡೆ, ಸುಮ್ಮಗೇ ಕಾಲವನ್ನು ಮುಂದೂಡುವುದು, ಭ್ರಷ್ಟಾಚಾರ, ಬೆಲೆಏರಿಕೆ, ರೈತರ ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸರಕಾರದ ವಿಫಲತೆ ಇವೆಲ್ಲಾ ರೈತರನ್ನೂ, ಇತರ ಜನಸಾಮಾನ್ಯರನ್ನೂ ತೀವ್ರ ಅತೃಪ್ತಿಗೊಳಿಸುತ್ತಾ ಬಂದಿದೆ. ಇದರೊಂದಿಗೆ ಪ್ರತಿಭಟನೆ ಸೂಚಿಸಲು ಬಂದ ರೈತರು ಮತ್ತು ಇತರ ಜನಸಾಮಾನ್ಯರೊಡನೆ ಸಹಕರಿಸಲು ಅಧಿಕಾರಿಗಳ ವಿರೋಧ, ಪೋಲೀಸರ ಮಧ್ಯಪ್ರವೇಶ-ಮೊದಲಾದ ಕಾರಣಗಳಿಂದ ಘಟನೆಗಳು ವಿಕೋಪಕ್ಕೆ ಹೋಗುವಂತಾಯಿತು. ನಡೆದೆಲ್ಲಾ ಘಟನೆ

(ಕಡೆಯ ಪುಟ ನೋಡಿ)

ರಾಯಚೂರಿನಲ್ಲಿ ಪೋಲೀಸ್ ದೌರ್ಜನ್ಯ

ಇನ್ನೂರೈವತ್ತು ಮಂದಿಯ ಬಂಧನ

ರಾಜ್ಯದಾದ್ಯಂತ ಪೋಲೀಸ್ ದೌರ್ಜನ್ಯವು ಮಿತಿಮೀರುತ್ತಿದೆ. ದುಡಿಯುವ ಜನರು ಮತ್ತು ಜನಸಾಮಾನ್ಯರು ನ್ಯಾಯವಾದ ಬೇಡಿಕೆಗಳ ಬಗ್ಗೆ ಸಂಘಟಿತ ಹೋರಾಟವನ್ನು ನಡೆಸುತ್ತಲಿರುವಾಗ ಪೋಲೀಸರು ಮಧ್ಯ ಪ್ರವೇಶಿಸಿ ಮಾಲಕರುಗಳಿಗನುಕೂಲವಾಗಿ ವರ್ತಿಸಿ, ಶ್ರಮಜೀವಿಗಳ ಹೋರಾಟವನ್ನು ಹತ್ತಿಕ್ಕುವುದು ಕಂಡುಬಂದಿದೆ. ಬೆಳಗಾವಿಯಿಂದ ಬೆಂಗಳೂರು ತನಕ, ಕೆ.ಜಿ.ಎಫ್. ನಿಂದ ಮಂಗಳೂರು ತನಕ ರಾಜ್ಯದಾದ್ಯಂತ ಇತ್ತೀಚೆಗೆ ಮುಂತೂ ಇದು ಹೆಚ್ಚಾಗಿದೆ. ರಾಯಚೂರು ನಗರದಲ್ಲಿ ನ್ಯಾಯಯುತವಾದ ಬೇಡಿಕೆಗಳ ಈಡೇರುವಿಕೆಗಾಗಿ ಶಾಂತಯುತವಾಗಿ ಹೋರಾಡುತ್ತಲಿದ್ದ ಲಾರಿ ಚಾಲಕರು ಮತ್ತು ಕ್ಲೀನರ್‌ಗಳು ಮತ್ತು ಅವರಿಗೆ ಬೆಂಬಲವಿತ್ತವರ ಮೇಲೆ ಅಮಾನುಷ ರೀತಿಯ ಲಾಠಿ ಚಾರ್ಜು ನಡೆಸಿ, ಇನ್ನೂರೈವತ್ತಕ್ಕೂ ಹೆಚ್ಚಿಗೆ ಮಂದಿಯನ್ನು ಬಂಧಿಸಿರುವುದು ಪೋಲೀಸ್ ಪಕ್ಷಪಾತ ಮತ್ತು ದೌರ್ಜನ್ಯಕ್ಕೆ ಇನ್ನೊಂದು ಉದಾಹರಣೆ.

ರಾಯಚೂರು ನಗರದಲ್ಲಿ ಲಾರಿ ಚಾಲಕರು ಮತ್ತು ಕ್ಲೀನರುಗಳು ಸಂಘ ರಚಿಸಿ ಜೂನ್ 25ರಿಂದ ಹೆಚ್ಚಿಗೆ ವೇತನ ಮತ್ತು ಇತರ ಸವಲತ್ತುಗಳನ್ನು ಕೇಳಿ ಶಾಂತಯುತವಾಗಿ ಹೋರಾಡುತ್ತಾ ಬಂದಿರುವರು. ಸಿ.ಐ.ಟಿ.ಯು. ನೇತೃತ್ವದ ರಾಯಚೂರು ಜಿಲ್ಲಾ ಲಾರಿ ಚಾಲಕರ ಮತ್ತು ಕ್ಲೀನರುಗಳ ಸಂಘದ ನೇತೃತ್ವದಲ್ಲಿ ನಡೆಯುತ್ತಲಿದ್ದ ಈ ಹೋರಾಟಕ್ಕೆ ನಗರದ ಎಲ್ಲಾ ಕಾರ್ಮಿಕ ಸಂಘಟನೆಗಳ ಬೆಂಬಲ ದೊರೆತಿತ್ತು. ಲೇಬರ್ ಆಫೀಸಿನಲ್ಲಿ ಮಾತುಕತೆ ನಡೆದು ಜುಲೈ 20ರಂದು ಮಾತುಕತೆ ಮುರಿದು ಬಿದ್ದಿತ್ತು. ಇದಕ್ಕೆ ಮೊದಲು ಎರಡು ದಿವಸ ಜಿಲ್ಲೆಯ ಎಲ್ಲಾ ಲಾರಿಗಳನ್ನು ನಿಲ್ಲಿಸಲಾಯಿತು. ಜುಲೈ 21 ಮತ್ತು 22ರಂದು ರಾಜ್ಯಪಾಲರು ರಾಯಚೂರಿಗೆ ಭೇಟಿ ಇತ್ತರು. 21ರಂದು ಅವರಿಗೆ ಒಂದು ಮನವಿಯನ್ನು ಅರ್ಪಿಸಲಾಯ್ತು. 22 ರಂದು ಬೇರೆ ಬೇರೆ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ರ್‍ಯಾಲಿಯನ್ನು ನಡೆಸಲು ಯೋಜನೆ ಹಾಕಲಾಯಿತು.

ರಾಯಚೂರು ಜಿಲ್ಲಾ ಲಾರಿ ಚಾಲಕರ ಮತ್ತು ಕ್ಲೀನರುಗಳ ಸಂಘ, ರಾಯಚೂರು ರಿಕ್ಷಾ ಚಾಲಕರ ಸಂಘ, ಲೋಕೋಪಯೋಗಿ ದಿನಕೂಲಿಗಳ ಸಂಘ, ಯಮರಸ ಸಹಕಾರಿ ನೂಲಿನ ಗಿರಣಿ ಕಾರ್ಮಿಕರ ಸಂಘ, ಕೆ. ಎಸ್. ಆರ್. ಟಿ. ಸಿ. ಮಜ್ದೂರ್ ಸಂಘ, ಗಂಜ ಹಮಾಲರ ಸಂಘ, ಗಂಜ ಗುಮಾಸ್ತರ ಸಂಘ, ಕಾರ ಚಾಲಕರ ಸಂಘ ಮತ್ತು ರಾಯಚೂರು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಗಳ ಪ್ರತಿನಿಧಿಗಳಿಂದೊಡಗೂಡಿದ ಸಮನ್ವಯ ಸಮಿತಿಯು 22ರಂದು ಜಂಟೀ ಮೆರವಣಿಗೆ ತೆಗೆ

(ಕಡೆಯ ಪುಟ ನೋಡಿ)

ಸಿ. ಪಿ. ಐ. (ಎಂ) ರಾಜ್ಯಸಮಿತಿ ತೀರ್ಮಾನ

ಪೋಲೀಸ್ ದೌರ್ಜನ್ಯದ ವಿರುದ್ಧ ವಾರಾಚರಣೆಗೆ ಕರೆ

ಇತ್ತೀಚೆಗಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಪೋಲೀಸ್ ದೌರ್ಜನ್ಯ ಹೆಚ್ಚುತ್ತಿದೆ. ಸಮಾಚಾರ ಪತ್ರಿಕೆಗಳಲ್ಲಿ ಇತ್ತೀಚೆಗೆ ಬರುತ್ತಿರುವ ವರದಿ ಮತ್ತು ನಮ್ಮ ಅನುಭವಗಳಿಂದ ಇದು ಸ್ಪಷ್ಟವಾಗಿದೆ. ಪೋಲೀಸು ಅತ್ಯಾಚಾರಕ್ಕೆ ನಿರಪರಾಧಿಗಳು ಬಲಿಯಾಗುವದಕ್ಕೆ ಕೆಲವೇ ದಿನಗಳ ಹಿಂದೆ ಸಾಗರ ಪೋಲೀಸು ಠಾಣೆಯಲ್ಲಿ ರಾಮ ಎಂಬುವರು ಸತ್ತಿದ್ದೂ, ಶಿಕಾರಿಪುರ ಪೋಲೀಸ್ ಠಾಣೆಯಲ್ಲಿ ಶಂಕರಪ್ಪ ಎಂಬವರನ್ನು ಹಿಂಸಿಸಿದ್ದೂ ಉದಾಹರಣೆಗಳು. ಕಾನೂನು ರಕ್ಷಣೆ ಮಾಡಬೇಕಾಗಿರುವ ಪೋಲೀಸರು ಕಾರ್ಮಿಕರ ಮತ್ತು ಇತರ ಶ್ರಮಜೀವಿಗಳ ಸಂಘಟಿತ ಹೋರಾಟದಲ್ಲಿ ಮಾಲೀಕರ ಪರವಾಗಿ ಮಧ್ಯಪ್ರವೇಶಿಸುವುದು ಮತ್ತು ನ್ಯಾಯಯುತವಾದ ಹೋರಾಟಗಳನ್ನು ದಬ್ಬಾಳಿಕೆಗಳ ಮೂಲಕ ಹತ್ತಿಕ್ಕುವುದು ದಿನನಿತ್ಯದ ಸಂಗತಿಯಾಗಿದೆ. ಬೆಂಗಳೂರಿನ ತಾತಗುಣಿ ಎಸ್ಟೇಟಿನ ಕಾರ್ಮಿಕರ ಹೋರಾಟದಲ್ಲಿ, ನಗರದ ಮೈಕೊ ಮತ್ತು ಐ. ಟಿ. ಸಿ. ಕಾರ್ಮಿಕರ ಹೋರಾಟದ ಸಂದರ್ಭದಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಸಂಸೆ ಟೀ ತೋಟದಲ್ಲಿ ಕಾರ್ಮಿಕರ ಮೇಲೆ ಪೋಲೀಸು ದಬ್ಬಾಳಿಕೆ, ಬೆಳಗಾವಿಯಲ್ಲಿ ಲಾಠಿಚಾರ್ಜು ಮತ್ತು ನೂರಾರು ಕಾರ್ಮಿಕರ ಬಂಧನ, ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಇವೆಲ್ಲಾ ಇದಕ್ಕೆ ನಿದರ್ಶನ.

ಹೆಚ್ಚುತ್ತಿರುವ ಪೋಲೀಸು ದಬ್ಬಾಳಿಕೆಯನ್ನು ತುಮಕೂರಿನಲ್ಲಿ ಜುಲೈ 18, 19 ಮತ್ತು 20ರಂದು ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ಗಂಭೀರವಾಗಿ ಚರ್ಚಿಸಿ, ಆಗಸ್ಟ್ 25ರಿಂದ 31ರ ತನಕ ರಾಜ್ಯದಾದ್ಯಂತ 'ಪೋಲೀಸ್ ದೌರ್ಜನ್ಯ ವಿರೋಧಿ ವಾರಾಚರಣೆ'ಯನ್ನು ನಡೆಸಲು ತನ್ನೆಲ್ಲಾ ಘಟಕಗಳಿಗೆ ಕರೆ ಇತ್ತಿದೆ. ಆಗಸ್ಟ್ 31 ರಂದು ಎಲ್ಲಾ ಕಡೆಗಳಲ್ಲೂ ಪೋಲೀಸು ಠಾಣೆ ಮತ್ತು ಉನ್ನತ ಪೋಲೀಸ್ ಅಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನಾ ಧರಣೆಯನ್ನೂ, ಸಭೆ ಮೆರವಣಿಗೆಗಳನ್ನೂ ನಡೆಸಲು ರಾಜ್ಯಸಮಿತಿಯು ಕರೆ ಇತ್ತಿದೆ.

ಬೆಲೆಏರಿಕೆ ವಿರುದ್ಧ ಹೋರಾಡಲು ಕರೆ :

ಸಕ್ಕರೆ ಮತ್ತಿತರ ಅಗತ್ಯ ವಸ್ತುಗಳ ತೀವ್ರವಾದ ಬೆಲೆಏರಿಕೆ, ರಾಜ್ಯ ರಸ್ತೆ ಸಾರಿಗೆ ಬಸ್ಸುದರ ಏರಿಕೆ ಮತ್ತು ಹೋಟೆಲುಗಳಲ್ಲಿನ ಬೆಲೆಏರಿಕೆಯನ್ನು ಮತ್ತು ಜನತೆಯ ಸಮಸ್ಯೆಗಳ ಬಗ್ಗೆ ಚರ್ಚಿಸಿದ ರಾಜ್ಯಸಮಿತಿಯು ಈ ಎಲ್ಲಾ ಸಮಸ್ಯೆಗಳು ಕಾಂಗ್ರೆಸ್ (ಐ) ಸರಕಾರದ ವಿಫಲತೆಯನ್ನೂ, ಚುನಾವಣಾ ಸಂದರ್ಭದಲ್ಲಿ ಕೊಟ್ಟ ಭರವಸೆಗಳನ್ನು ಈಡೇರಿಸುವತ್ತ ಏನೇನೂ ಗಮನವೀಯದಿರುವುದನ್ನೂ ತೋರಿಸುತ್ತದೆ; ಇದಕ್ಕೆಲ್ಲಾ ದೇಶವನ್ನು ಆಳುವ ಕಾಂಗ್ರೆಸ್ (ಐ) ಪಕ್ಷವು ಅನುಸರಿಸುತ್ತಿರುವ ಬಂಡವಾಳಶಾಹಿ ಪಥ ಮತ್ತು ರಾಜ್ಯಸರಕಾರದ ಜನವಿರೋಧಿ ಕ್ರಮಗಳೇ ಕಾರಣವೆಂದು ರಾಜ್ಯಸಮಿತಿಯು ಅಭಿಪ್ರಾಯಪಟ್ಟಿದೆ. ಸಿಟಿ ಬಸ್ಸು ದರಏರಿಕೆಯ ವಿರುದ್ಧ ಯಶಸ್ವಿ ಪ್ರತಿಭಟನೆ ನಡೆಸಿದ ಪಕ್ಷದ ದ. ಕ. ಜಿಲ್ಲಾ ಘಟಕ ಮತ್ತು ಜನತೆಗೂ, ಬೆಲೆಏರಿಕೆ ವಿರುದ್ಧ ಬಿಜಾಪುರ ಬಂದ್ ನಡೆಸಲು ಶ್ರಮಿಸಿದ ಪಕ್ಷದ ಘಟಕ ಮತ್ತು ಜನತೆಗೂ ರಾಜ್ಯಸಮಿತಿಯು ಅಭಿನಂದನೆ ಸಲ್ಲಿಸಿದೆ. ಬೆಲೆಏರಿಕೆ ಸಮಸ್ಯೆ ವಿರುದ್ಧ, ಸಾಧ್ಯವಾದಲ್ಲೆಲ್ಲಾ ಇತರ ಪಕ್ಷ ಮತ್ತು ಸಂಘಟನೆಗಳ ಸಹಕಾರವನ್ನು ಪಡೆದು, ಜನತೆಯ ಹೋರಾಟವನ್ನು ಸಂಘಟಿಸಲು ರಾಜ್ಯಸಮಿತಿಯು ಕರೆ ಇತ್ತಿದೆ.

ತ್ರಿಪುರಾಕ್ಕೆ ಸಹಾಯ :

ಇತ್ತೀಚೆಗಿನ ಹಿಂಸಾಕಾಂಡದಲ್ಲಿ ನೊಂದ ಜನತೆಯ ಪರಿಹಾರ ಕಾರ್ಯಕ್ಕೆ ಸಹಾಯಮಾಡಲು ರಾಜ್ಯದಾದ್ಯಂತ ತ್ರಿಪುರಾ ಪರಿಹಾರ ನಿಧಿಯನ್ನು ಎಲ್ಲಾ ಕಡೆಗಳಲ್ಲೂ ಜುಲೈ ತಿಂಗಳ ಕೊನೆಯೊಳಗೇ ಸಂಗ್ರಹಿಸಿ ರಾಜ್ಯಸಮಿತಿ ಕಛೇರಿಗೆ ಕಳುಹಿಸಲು ರಾಜ್ಯಸಮಿತಿಯು ಕರೆ ಇತ್ತಿದೆ. ತ್ರಿಪುರಾದ ಎಡರಂಗ ಸರಕಾರದ ವಿರುದ್ಧ ಛಿದ್ರಕಾರಿ ಶಕ್ತಿಗಳು ಮತ್ತು ಪ್ರತಿಗಾಮಿ ಶಕ್ತಿಗಳು ನಡೆಸುವ ಪಿತೂರಿಯನ್ನು ಬಯಲುಮಾಡಿ, ತ್ರಿಪುರಾ ಎಡರಂಗ ಸರಕಾರವನ್ನು ಬೆಂಬಲಿಸಿ, ಎಡಪ್ರಜಾ

(ಕಡೆಯ ಪುಟ ನೋಡಿ)

ಟ್ರೇಡ್‌ಯೂನಿಯನ್ ಹಕ್ಕುಗಳಿಗಾಗಿ 1980 ಜುಲೈ 14 ರಂದು ಬೆಂಗಳೂರಲ್ಲಿ ನಡೆದ

ಕರ್ನಾಟಕ ರಾಜ್ಯ ಸಮಾವೇಶದ ನಿರ್ಣಯ

ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ತಾ. 14-7-1980ರಂದು ಸೇರಿದ್ದ ಕರ್ನಾಟಕ ರಾಜ್ಯದ ಟ್ರೇಡ್‌ಯೂನಿಯನ್ ಕಾರ್ಯಕರ್ತರ ಈ ಸಮಾವೇಶವು ಕರ್ನಾಟಕ ಸರ್ಕಾರವು ಟ್ರೇಡ್‌ಯೂನಿಯನ್ ಹಕ್ಕುಗಳ ಮೇಲೆ ನಡೆಸುತ್ತಿರುವ ದಾಳಿಯನ್ನು ಕಳವಳದಿಂದ ಗಮನಿಸುತ್ತದೆ,

'ಬಡವರ ರಕ್ಷಣೆ'ಯ ಘೋಷಣೆಯನ್ನು ಮೊಳಗಿಸುತ್ತ ಅಧಿಕಾರಕ್ಕೆ ಬಂದ ಸರ್ಕಾರವು ಕಾರ್ಮಿಕವರ್ಗದ ಸಂಘಟನೆಯ ಮೇಲೆ ದಾಳಿಮಾಡಲು ತನ್ನ ಎಲ್ಲಾ ಸಾಮರ್ಥ್ಯವನ್ನೂ ಉಪಯೋಗಿಸಿದೆ. ಕಾರ್ಮಿಕವರ್ಗದ ಹೋರಾಟಗಳನ್ನು ಕ್ರೂರವಾಗಿ ಹತ್ತಿಕ್ಕಲು ಪೋಲೀಸ್ ದಳವನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸಲಾಗುತ್ತಿದೆ,

ಅದೇ ಸಮಯದಲ್ಲಿ ಕನಿಷ್ಠ ಕೂಲಿ ನೋಟಿಫಿಕೇಷನ್ ಮುಂತಾದ ಕಾರ್ಮಿಕ ಕಾನೂನುಗಳನ್ನು ಜಾರಿಮಾಡಲು ನಿರಾಕರಿಸುವ ಮಾಲೀಕರಿಗೆ ಸರ್ಕಾರವು ಎಲ್ಲಾ ರೀತಿಯ ಸಹಾಯಮಾಡುತ್ತಿದೆ. ಮುಷ್ಕರಗಳನ್ನು ನಿಷೇಧಿಸುವುದು, ಬೀಗಮುದ್ರೆಗಳನ್ನು ಮುಂದುವರಿಸುವುದು ಇವುಗಳಲ್ಲಿ ಈ ಸರ್ಕಾರವು ಹಿಂದಿನ ಎಲ್ಲಾ ಸರ್ಕಾರಗಳನ್ನೂ ಮೀರಿಸಿದೆ,

ಈ ಸರ್ಕಾರವು ಎಲ್ಲಾ ನಿಯಮಗಳನ್ನೂ ಬದಿಗೊತ್ತಿದೆ. ವಿವಿಧ ಸಮಿತಿಗಳಲ್ಲಿರುವ ಕಾರ್ಮಿಕ ಪ್ರತಿನಿಧಿಗಳ ರಾಜಿನಾಮೆಗಳನ್ನು ಪಡೆಯುವುದರ ಮೂಲಕ ಆಯಾ ಸಮಿತಿಗಳು ಕೆಲಸ ಮಾಡದಂತೆ ಮಾಡಿದೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಅಗತ್ಯಸೇವೆಗಳೆಂದು ಕರೆಸಿಕೊಳ್ಳುವ ಸಾರಿಗೆ, ನೀರು ಸರಬರಾಜು ಮತ್ತು ವಿದ್ಯುತ್ ಕೈಗಾರಿಕೆಗಳಲ್ಲಿನ ಕಾರ್ಮಿಕರು ಅಪ್ಪಣೆಯಿಲ್ಲದೆ ಗೈರುಹಾಜರಾದರೂ ಅವರಿಗೆ ಉಗ್ರಶಿಕ್ಷೆ ವಿಧಿಸುವಂಥ ಮಸೂದೆಯೊಂದನ್ನು ಸರ್ಕಾರವು ತಂದಿದೆ,

ಈ ಮಸೂದೆಯು - ಕರ್ನಾಟಕ ಅಗತ್ಯ ಸೇವೆಗಳ ಮಸೂದೆ 1979 ಈಗ ವಿಧಾನಮಂಡಲದ ಜಂಟಿ ಸಮಿತಿಗೆ ಒಪ್ಪಿಸಲ್ಪಟ್ಟಿದೆ. ಈ ಅಧಿಕಾರಶಾಹಿ ಮಸೂದೆಯನ್ನು ಕೈಬಿಡುವಂತೆ ಟ್ರೇಡ್‌ಯೂನಿಯನ್ ಚಳುವಳಿ ಹಾಗೂ ಇತರಪ್ರಜಾತಾಂತ್ರಿಕ ಶಕ್ತಿಗಳು ಸರ್ಕಾರ ಮತ್ತು ಆಳುವ ಪಕ್ಷದ ಮೇಲೆ ಒತ್ತಾಯ ತರದಿದ್ದಲ್ಲಿ ಅದು ವಿಧಾನಮಂಡಲದಲ್ಲಿ ಅಂಗೀಕೃತವಾಗುವ ಸಾಧ್ಯತೆಯಿದೆ. ಈ ಅಗತ್ಯ ಸೇವಾ ಮಸೂದೆಯನ್ನು (ಅದರ ನಕಲನ್ನು ಈ ಸಮಾವೇಶದಲ್ಲಿ ಹಂಚಲಾಗಿದೆ) ಪಾರ್ಲಿಮೆಂಟ್‌ನಲ್ಲಿ- ಎಲ್ಲಾ ವಿರೋಧ ಪಕ್ಷಗಳ ಪ್ರತಿಭಟನೆಯಿದ್ದರೂ- ಅಸ್ಸಾಂ ರಾಜ್ಯಕ್ಕೆ ಅನ್ವಯಿಸುವಂತೆ ಅಂಗೀಕರಿಸಲಾಗಿದೆ, ಅಸ್ಸಾಂನಲ್ಲಿ ಸ್ಫೋಟಕ ಪರಿಸ್ಥಿತಿಯಿದ್ದರೂ, ಅಗತ್ಯ ಸೇವಾ ಮಸೂದೆಯನ್ನು ಎಲ್ಲಾ ವಿರೋಧ ಪಕ್ಷಗಳೂ ವಿರೋಧಿಸಿರುವುದರಿಂದ ಈ ಕರಾಳ ಶಾಸನವನ್ನು ತರಲು ರಾಜ್ಯಸರ್ಕಾರಕ್ಕೆ ಯಾವುದೇರೀತಿಯ ಕಾರಣವಿಲ್ಲ. ಕಳೆದ ಎರಡುದಶಕಗಳಿಂದಕರ್ನಾಟಕದಲ್ಲಿರುವ ಅಗತ್ಯ ಸೇವೆಗಳಲ್ಲಿ ಗಂಭೀರ ರೀತಿಯ ಮುಷ್ಕರ ನಡೆದಿಲ್ಲ.

ಬೇರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಕೈಗಾರಿಕಾಶಾಂತಿಯಿರುವ ಈ ರಾಜ್ಯದಲ್ಲಿ ಈ ರೀತಿಯ ಕರಾಳ ಶಾಸನವನ್ನು ತರಲು ರಾಜ್ಯಸರ್ಕಾರಕ್ಕಿರುವ ಉದ್ದೇಶ ಸ್ಪಷ್ಟ: ಅಂದರೆ ದೇಶದ ಟ್ರೇಡ್‌ಯೂನಿಯನ್ ಚಳವಳಿಯನ್ನು ಮುರಿಯಲು ಅಧಿಕಾರಶಾಹಿ ಶಾಸನಗಳನ್ನು ತರುವ ಕೇಂದ್ರ ಸರ್ಕಾರದ ನೀತಿಯನ್ನು ಅನುಸರಿಸುವುದು. ಚಳವಳಿಯು ದುರ್ಬಲವಾಗಿರುವ ಪ್ರದೇಶದಲ್ಲಿ ಯಾವುದೇ ಅಸಮ್ಮತವಾಗುವ ಕಾನೂನನ್ನು ತಂದು ನಂತರ ಅದನ್ನು ಬೇರೆ ಪ್ರದೇಶಗಳಿಗೆ ವಿಸ್ತರಿಸುವುದು ಆಳುವ ವರ್ಗಗಳ ಹಳೆಯ ಅಭ್ಯಾಸವಾಗಿದೆ ಆದರೆರಾಜ್ಯ ಸರ್ಕಾರದ ಈ ರೀತಿಯ ದುಷ್ಟ ನಡತೆಗಳನ್ನು ಕಂಡುಹಿಡಿದು, ಹೋರಾಡಿ ಹಿಮ್ಮೆಟ್ಟಿಸುವುದಕ್ಕೆ ಕರ್ನಾಟಕದ ಟ್ರೇಡ್‌ಯೂನಿಯನ್ ಚಳವಳಿಗೆ ಸಾಮರ್ಥ್ಯವಿದೆ.

ಕಾರ್ಮಿಕವರ್ಗದ ಮೇಲೆ ಅಧಿಕಾರಶಾಹಿ ಶಾಸನಗಳನ್ನು ಹೊರಿಸಲು ಆಳುವ ವರ್ಗಗಳು ರಾಷ್ಟ್ರೀಯ ಮಟ್ಟದಲ್ಲಿ ಪ್ರಯತ್ನಿಸುತ್ತಿರುವುದು ಅವರು ಪ್ರಜಾತಾಂತ್ರಿಕ ಹಕ್ಕುಗಳ ಮರ್ದನದ ಹಳೆಯ ಹಾದಿಯನ್ನೇ ಹಿಡಿಯುತ್ತಿದ್ದಾರೆಂಬುದನ್ನು ತೋರಿಸುತ್ತದೆ.

ಬಂಡವಾಳಶಾಹಿ ಬೆಳವಣಿಗೆಯ ದಿವಾಳಿಕೋರತನದ ಹಾದಿಯನ್ನು ಅನುಸರಿಸುತ್ತಿರುವ ಆಳುವ ವರ್ಗಗಳು ದೇಶದ ಆರ್ಥಿಕತೆಯನ್ನು ಹಾಳುಗೆಡವಿದ್ದಾರೆ. ಗ್ರಾಮಾಂತರ ಪ್ರದೇಶಗಳು ಹಾಗೂ ನಗರಗಳ ಗುಡಿಸಲು-ಬೀದಿಗಳಲ್ಲಿರುವ ನಮ್ಮ ಕೋಟ್ಯಾಂತರ ದೇಶಬಾಂಧವರ ಬಡತನ, ನಗರಗಳಲ್ಲಿ ಹಾಗೂ ದೇಶದ ಕೆಲವು ಗ್ರಾಮಾಂತರ ಭಾಗಗಳಲ್ಲಿ ಆಳುವ ವರ್ಗಗಳ ಸಾಹುಕಾರಿಕೆ ಇವುಗಳು ಆಳುವ ವರ್ಗಗಳು ಅನುಸರಿಸುತ್ತಿರುವ ಬಂಡವಾಳಶಾಹಿ ಬೆಳವಣಿಗೆಯ ಹಾದಿಯ ನೇರ ಫಲಿತಾಂಶವಾಗಿದೆ. ಸಹಸ್ರಾರು ಕುಶಲಕರ್ಮಿಗಳು, ಸಣ್ಣ ರೈತರು ಹಾಗೂ ಇತರ ದುಡಿಯುವ ಜನರು ತಮ್ಮ ಸಾಂಪ್ರದಾಯಿಕ ಕಸುಬುಗಳಿಂದ ಹೊರತಳ್ಳಲ್ಪಟ್ಟು ನಿರುದ್ಯೋಗಿಗಳ ಸಾಲನ್ನು ಹೆಚ್ಚಿಸುತ್ತಿದ್ದಾರೆ. ಅತಿ ಹೆಚ್ಚು ಲಾಭವೊಂದನ್ನು ಬಿಟ್ಟು ಬೇರಾವುದರಲ್ಲೂ ಆಸಕ್ತಿಯಿಲ್ಲದ ಆಳುವ ವರ್ಗಗಳು ಕಾರ್ಮಿಕರಿಗೆ ಅತಿ ಕನಿಷ್ಠ ಜೀವನಾವಶ್ಯಕತೆಗಳನ್ನೂ ನಿರಾಕರಿಸುತ್ತಿದ್ದಾರೆ.

ವಿಶೇಷವಾಗಿ ಅಸಂಘಟಿತ ಕಾರ್ಮಿಕರು ಹಾಗೂ ಹಳ್ಳಿಯ ಬಡವರನ್ನು ಒಳಗೊಂಡ ಕಾರ್ಮಿಕವರ್ಗದ ದಿವಾಳಿತನವು ಅದರ ಕೊಳ್ಳುವ ಶಕ್ತಿಯನ್ನು ತೀವ್ರವಾಗಿ ಕಡಿಮೆಗೊಳಿಸಿದೆ. ಇದರಿಂದಾಗಿ ಕೈಗಾರಿಕಾ ವಸ್ತುಗಳಿಗೆ ಮಾರುಕಟ್ಟೆ ಸಿಗಲಾರದು ಹಾಗೂ ಸ್ಥಗಿತ ಉಂಟಾಗುತ್ತದೆ.

ಲಾಭವಿಲ್ಲದ ಕ್ಷೇತ್ರಗಳಲ್ಲಿ ಆಳುವ ವರ್ಗಗಳು ಬಂಡವಾಳ ಹೂಡುವುದಿಲ್ಲ. ಇದರಿಂದಾಗಿ ಇಂಧನದ ಮೂಲಗಳು ಮುಂತಾದುವುಗಳನ್ನು ವಿಕಾಸಗೊಳಿಸುವ ಭಾರ ರಾಜ್ಯದ ಮೇಲೆ ಬೀಳುತ್ತದೆ. ನಾಗಾಲೋಟದ ಹಣದುಬ್ಬರ ಹಾಗೂ ಅದರ ಫಲವಾಗಿ ಖೋತಾ ಹಣಕಾಸಿನ ಕೊರತೆ- ಇವುಗಳಿಂದಾಗಿ ಸರ್ಕಾರವು ಅಭಿವೃದ್ಧಿಗಾಗಿ ಬಂಡವಾಳ ಹೂಡಲಾಗುವುದಿಲ್ಲ. ಇದರಿಂದಾಗಿ ತೈಲ, ವಿದ್ಯುತ್, ಕಲ್ಲಿದ್ದಲು, ರೈಲ್ವೆ ಸಾರಿಗೆ ಮುಂತಾದವುಗಳ ತೀವ್ರ ಕೊರತೆಯುಂಟಾಗಿದೆ.

ಒಂದೇಸಮನೆ ಏರುತ್ತಿರುವ ಬೆಲೆಗಳು ಹಾಗೂ ರೂಪಾಯಿಯ ಮೌಲ್ಯದ ಇಳಿತದಿಂದಾಗಿ ಸಂಘಟಿತ ಕಾರ್ಮಿಕರ ನಿಜವೇತನದಲ್ಲೂ ಇಳಿತವಾಗಿದೆ. ಆದ್ದರಿಂದಲೇ ಈ ಕಾರ್ಮಿಕರು ತಮ್ಮ ಗಳಿಕೆಗಳು ಹಾಗೂ ಜೀವನ ಸ್ಥಿತಿಗಳನ್ನು ರಕ್ಷಿಸಲು ಹೋರಾಡುತ್ತಿದ್ದಾರೆ,

ತೀವ್ರ ಶೋಷಣೆಯುಲ್ಲಿರುವ ಅಸಂಘಟಿತ ಕಾರ್ಮಿಕರು ತಮ್ಮ ಸಂಘಟನೆಗಳನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಜೀವನಸ್ಥಿತಿಗಳ ಸುಧಾರಣೆಗಾಗಿರುವ ಅವರ ಹೋರಾಟಗಳು ಇನ್ನೂ ಫಲಪ್ರದವಾಗಿಲ್ಲ.

ತಮ್ಮಲ್ಲೇ ಶಿಸ್ತು ತರುವುದಕ್ಕೆ ಬದಲಾಗಿ ಆಳುವ ವರ್ಗಗಳು ಕಾರ್ಮಿಕರಲ್ಲಿ ಶಿಸ್ತಿರಬೇಕೆಂದು ಬೊಬ್ಬೆ ಹೊಡೆಯುತ್ತಿವೆ. ಅತಿ ಹೆಚ್ಚು ಲಾಭದ ಗಳಿಕೆಬಿಟ್ಟು ಬೇರಾವುದರಲ್ಲೂ ಆಸಕ್ತಿಯಿಲ್ಲದ ಆಳುವ ವರ್ಗಗಳು ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ದಾಳಿ ಮಾಡುತ್ತಿವೆ.

ಕಾರ್ಮಿಕವರ್ಗ ಹಾಗೂ ಇತರ ಪ್ರಜಾತಾಂತ್ರಿಕ ಶಕ್ತಿಗಳ ಐಕ್ಯತೆಯನ್ನು ಮುರಿಯಲು ಆಳುವ ವರ್ಗಗಳು ಶಕ್ತಿಮೀರಿ ಪ್ರಯತ್ನಿಸುತ್ತಿವೆ. ಹಿಂದೆ ಮಾಡಿದಂತೆ ಕಾರ್ಮಿಕವರ್ಗವನ್ನು ನೇರವಾಗಿ ಒಡೆಯಲು ಈಗ ಸಾಧ್ಯವಿಲ್ಲದಿರುವುದರಿಂದ ಆಳುವ ವರ್ಗಗಳು ಕಾರ್ಮಿಕವರ್ಗದ ಚಳವಳಿಯನ್ನು ಶಕ್ತಿಹೀನಗೊಳಿಸಲು ಜಾತಿ, ಕುಲ, ಭಾಷೆ, ಪ್ರದೇಶ ಮುಂತಾದವುಗಳನ್ನು ಬಳಸುತ್ತಿದ್ದಾರೆ.

ಪ್ರಪ್ರಥಮವಾಗಿ ತನ್ನ ಒಗ್ಗಟ್ಟನ್ನು ಕ್ರೋಢೀಕರಿಸಿಕೊಂಡು ಇತರ ದುಡಿಯುವ ಜನತೆ ಹಾಗೂ ಪ್ರಜಾತಾಂತ್ರಿಕ ಶಕ್ತಿಗಳ ನೇತೃತ್ವ ವಹಿಸಿ ಕಾರ್ಮಿಕ ವರ್ಗವು ಆಳುವ ವರ್ಗಗಳ ಸಂಚನ್ನು ಸೋಲಿಸಬೇಕಾಗಿದೆ.

ಆದ್ದರಿಂದ ರಾಜ್ಯದ ಹಾಗೂ ಬೇರೆಡೆಗಳ ಕಾರ್ಮಿಕ ವರ್ಗಕ್ಕೆ ಈ ಸಮಾವೇಶವು ಕೆಳಕಂಡಂತೆ ಕರೆ ನೀಡುತ್ತದೆ,

1. ಅಗತ್ಯ ಸೇವಾ ಮಸೂದೆಯಂಥ ಶಾಸನಗಳನ್ನು ತರುವ ಆಳುವ ವರ್ಗಗಳ ಗುರಿಯನ್ನು ಹೋರಾಡಿ ವಿಫಲಗೊಳಿಸುವುದು.

2. ಜಾತಿ, ಕುಲ, ಭಾಷೆ, ಪ್ರದೇಶ ಇತ್ಯಾದಿಗಳನ್ನು ಬಳಸಿ ಕಾರ್ಮಿಕವರ್ಗ ಮತ್ತಿತರ ದುಡಿಯುವ ಜನತೆಯನ್ನು ವಿಭಜಿಸುವ ಆಳುವ ವರ್ಗಗಳ ತಂತ್ರವನ್ನು ಬಯಲಿಗೆಳೆಯುವುದು ಹಾಗೂ ಕಾರ್ಮಿಕವರ್ಗ ಚಳವಳಿ ಮತ್ತು ದೇಶದ ವಿಭಜನೆಯ ವಿರುದ್ಧ ಹೋರಾಡುವುದು.

3. ಸಂಘಟನೆಗಳನ್ನು ಕ್ರೋಢೀಕರಿಸಿ ಹೋರಾಡುವ ಸಾಮರ್ಥ್ಯವನ್ನು ತೀವ್ರಗೊಳಿಸುವುದು ಮತ್ತು ಕಾರ್ಮಿಕ ವರ್ಗ ಚಳವಳಿಯ ಐಕ್ಯತೆಯನ್ನು ಕಾಪಾಡುವುದು.

4. ಟ್ರೇಡ್ ಯೂನಿಯನ್ ಹಕ್ಕುಗಳ ಮೇಲಿನ ದಾಳಿಯು ಪ್ರಜಾತಾಂತ್ರಿಕ ಹಕ್ಕುಗಳ ಮೇಲಿನ ದಾಳಿಯ ಮುನಸೂಚನೆಯೆಂದು ಇತರ ಪ್ರಜಾತಾಂತ್ರಿಕ ವಿಭಾಗಗಳಿಗೆ ಎಚ್ಚರಿಕೆ ನೀಡಿ, ಅವುಗಳು ಕಾರ್ಮಿಕವರ್ಗದ ಹೋರಾಟಗಳೊಡನೆ ಮೈತ್ರಿಯಿಂದಿರಬೇಕೆಂದು ಒತ್ತಾಯಿಸುವುದು.

ಅಗತ್ಯಸೇವಾ ಮಸೂದೆಯನ್ನು ಹಿಂತೆಗೆಯುವಂತೆ ಹಾಗೂ ಔದ್ಯಮಿಕ ವಿವಾದಗಳಲ್ಲಿ ಪೋಲೀಸ್ ಹಸ್ತಕ್ಷೇಪವನ್ನು ತಡೆಯುವಂತೆ ರಾಜ್ಯಸರ್ಕಾರದ ಮೇಲೆ ಕೂಡಲೇ ಒತ್ತಾಯ ತರಬೇಕೆಂದು ಈ ಸಮಾವೇಶವು ರಾಜ್ಯದ ಕಾರ್ಮಿಕವರ್ಗಕ್ಕೆ ಕರೆ ನೀಡುತ್ತದೆ.

ಈ ಮಸೂದೆಯನ್ನು ಕೂಡಲೇ ಹಿಂತೆಗೆಯಬೇಕೆಂದು ಸಮಾವೇಶವು ರಾಜ್ಯ ಸರ್ಕಾರವನ್ನು ಆಗ್ರಹಪಡಿಸುತ್ತದೆ. ರಾಜ್ಯಸರ್ಕಾರವು ಈ ಮಸೂದೆಯನ್ನು ಹಿಂತೆಗೆಯದಿದ್ದಲ್ಲಿ ಮತ್ತು ಔದ್ಯಮಿಕ ವಿವಾದಗಳಲ್ಲಿ ಪೋಲೀಸ್ ಹಸ್ತಕ್ಷೇಪವಿರದಂತೆ ಖಾತ್ರಿಗೊಳಿಸದಿದ್ದಲ್ಲಿ, ರಾಜ್ಯದ ಎಲ್ಲಾ ಟ್ರೇಡ್‌ಯೂನಿಯನ್‌ಗಳೂ ಎಲ್ಲಾ ಆಡಳಿತವರ್ಗಗಳಿಗೆ ತಾ|| 1-8-1980ರಂದು ಮುಷ್ಕರದ ನೋಟೀಸ್ ಕೊಡಬೇಕೆಂದೂ, ತಾ|| 18 - 8 - 1980 ರಂದು "ಸಾರ್ವತ್ರಿಕ ಮುಷ್ಕರ" ನಡೆಸಬೇಕೆಂದೂ ಕರೆ ಕೊಡುತ್ತದೆ.

ಇತರ ಎಲ್ಲಾ ರಾಜ್ಯಗಳ ಕಾರ್ಮಿಕ ವರ್ಗವು ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕೆಂದೂ, ಟ್ರೇಡ್‌ಯೂನಿಯನ್ ಹಕ್ಕುಗಳ ರಕ್ಷಣೆಗಾಗಿ ಚಳವಳಿ ಆರಂಭಿಸಬೇಕೆಂದೂ ಈ ಸಮಾವೇಶವು ಆಗ್ರಹಪಡಿಸುತ್ತದೆ.

ಈ ಸಮಾವೇಶದಲ್ಲಿ ಚುನಾಯಿತವಾಗಲಿರುವ ರಾಜ್ಯ ಟ್ರೇಡ್‌ಯೂನಿಯನ್ ಹಕ್ಕುಗಳ ಸಮನ್ವಯ ಸಮಿತಿಗೆ ಟ್ರೇಡ್‌ಯೂನಿಯನ್ ಹಕ್ಕುಗಳ ರಕ್ಷಣೆಗಾಗಿ ರಾಜ್ಯದಲ್ಲಿ ಚಳವಳಿ ರೂಪಿಸಿ ಮಾರ್ಗದರ್ಶನ ನೀಡಲು ಈ ಸಮಾವೇಶವು ಅಧಿಕಾರ ನೀಡುತ್ತದೆ. ●

ಕಾವ್ರಾಡಿಯಲ್ಲಿ ಯುವಜನ ಸಭೆ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಾವ್ರಾಡಿ ಗ್ರಾಮದಲ್ಲಿ 13–7–80ರಂದು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಉದ್ಘಾಟನಾ ಸಭೆಯು ಶ್ರೀ ಕೊರಗ ಆಂಡ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಯುವಜನ ಮುಂಖಂಡರುಗಳಾದ ಕಾಂ. ಕೆ. ಶಂಕರ್ ಮತ್ತು ಕಾಂ. ವಿ. ಮಹಾಬಲ ದೇವಡಿಗರವರುಗಳು ಮಾತನಾಡಿ ಯುವಜನ ಸಂಘಟಿತರಾಗಬೇಕಾದ ಮಹತ್ವವನ್ನು ವಿವರಿಸಿದರು. ಸ್ಥಳೀಯವಾಗಿ ವಯಸ್ಕ ಶಿಕ್ಷಣ ಶಾಲೆಯೊಂದನ್ನು ಆರಂಭಿಸಿ ಅವಿದ್ಯಾವಂತ ರೈತ, ಕಾರ್ಮಿಕ ಬಂಧುಗಳಿಗೆ ಶಿಕ್ಷಣಾವಕಾಶ ಒದಗಿಸಿಕೊಡುವ ನಿರ್ಣಯ ಮಾಡಲಾಯಿತು.

ಸ್ಥಳೀಯವಾಗಿ ಈ ಕೆಳಗಿನವರುಗಳನ್ನೊಳಗೊಂಡ ಸಂಘಟನಾ ಸಮಿತಿಯೊಂದನ್ನು ರಚಿಸಲಾಯಿತು:-

ಅಧ್ಯಕ್ಷ ಶ್ರೀ ಕೊರಗ ಆಂಡ, ಕಾರ್ಯದರ್ಶಿ ಶ್ರೀ ರಮೇಶ ಪ್ರಭು, ಜೊತೆಕಾರ್ಯದರ್ಶಿಯಾಗಿ ಶ್ರೀ ಜಯರಾಮಶೆಟ್ಟಿ ಬಿ. ಕಾಂ., ಸಮಿತಿ ಸದಸ್ಯರುಗಳಾಗಿ-ಶೀನಪೂಜಾರಿ, ಸದಾನಂದ ಕಿಣಿ, ಬಾಬುಶೆಟ್ಟಿ, ಕುಷ್ಟ ಕುಲಾಲ್, ಕೆ. ಎಚ್. ಕುಲಾಲ್, ಸುಧಾಕರ, ಬಿ. ಕೊರಗಪ್ಪ, ವಿಶ್ವೇಶ್ವರ ಪೂಜಾರಿ, ಕೂಸು ಕುಲಾಲ, ವಿಠಲ ಶೆಟ್ಟಿ. ಚಿಕ್ಕಯ್ಯ ಪಗಡಿಗಾರ, ಬಚ್ಚ ಮರಕಾಲ.

○

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

—ಇ. ಎಂ. ಎಸ್. ನಂಬೂದಿರಿಪಾಡ್

ರಾಷ್ಟ್ರೀಯ ಉತ್ಕ್ರಾಂತಿ :

ಜಾತಿಯನ್ನು ಆಧರಿಸಿದ ಪ್ರತ್ಯೇಕತಾ ರಾಜಕೀಯ ಚಳುವಳಿಗೂ ಆಧುನಿಕ ಜಾತ್ಯತೀತ ಪ್ರಜಾಪ್ರಭುತ್ವವಾದೀ ರಾಜಕೀಯ ಚಳುವಳಿಗೂ ನಡುವೆ ಇದು ಬದಲಾವಣೆಯ ಗೆರೆಯಾಯಿತು.

ಇದು ಒಂದು ದೃಷ್ಟಿಯಿಂದ ನಿಜವಾದ ಮಾತು. ನಮ್ಮ ರಾಜಕೀಯ ಇತಿಹಾಸದಲ್ಲೇ ಮೊದಲ ಬಾರಿಗೆ, ಎಲ್ಲಾ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮುಗಳಿಗೆ ಒಳಗೊಂಡ ಚಳುವಳಿಯೊಂದು ಈಗ ಹುಟ್ಟಿಕೊಂಡಿತು. ಜಾತಿ, ಕೋಮುಗಳ ಗಣನೆ ಇಲ್ಲದೆ ಎಲ್ಲಾ ವರ್ಗಕ್ಕೆ ಸೇರಿದ ಸಾಮಾನ್ಯ ಜನತೆಯ ಬೇಡಿಕೆ ಮತ್ತು ನೋವುಗಳಿಗೆ ಧ್ವನಿಕೊಟ್ಟ ಚಳುವಳಿ ಕೇರಳಕ್ಕಂತೂ ಬಹಳ ಹೊಸದಾಗಿತ್ತು.

ಹೀಗೆಂದ ಮಾತ್ರಕ್ಕೆ ಜಾತಿ, ಉಪಜಾತಿ ಮತ್ತು ಧಾರ್ಮಿಕ ಕೋಮುಗಳ ಅಂಶಗಳು ಅಸ್ತಿತ್ವದಲ್ಲಿರಲಿಲ್ಲ ಎಂದು ಅರ್ಥವಲ್ಲ. ವಾಸ್ತವವಾಗಿ ಅವು ಅತಿ ಪ್ರಮುಖ ಅಂಶವಾಗಿ ಮುಂದುವರೆದು ಪಕ್ಷಗಳ ಕೆಲಸ ಕಾರ್ಯಗಳಲ್ಲಿ ತಮ್ಮ ಪ್ರಭಾವ ಬೀರಿದವು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪದಲ್ಲಿ ಇದ್ದು, ಅದನ್ನು ಉಳಿಸಿಕೊಳ್ಳಲು, ಇದರ ನಾಯಕರು ತುಂಬಾ ಶ್ರಮಿಸಿದರೂ ಕೂಡ, ಈ ಪಕ್ಷವು ಕೆಲವೇ ಜಾತಿಗಳ ಪ್ರಭುತ್ವದಲ್ಲಿದ್ದು ಉಳಿದ ಜಾತಿಗಳನ್ನು ಬಿಟ್ಟದ್ದು-ಸ್ಪಷ್ಟವಾದ ವಿಚಾರವೇ ಆಗಿದೆ. ಗಾಂಧೀಜಿಯ ಮುಂದಾಳತ್ವದಲ್ಲಿ ಕಾಂಗ್ರೆಸ್ ಪಕ್ಷ ಹೂಡಿದ ಚಳುವಳಿಯು ಕಾಂಗ್ರೆಸ್ ಮತ್ತು ಖಿಲಾಫತ್ ಸಮಿತಿಯ ಒಪ್ಪಂದದ ಆಧಾರದ ಮೇಲೆ ನಿಂತಿತ್ತು. ಅಸ್ಪೃಶ್ಯರೂ, ಕ್ರಿಶ್ಚಿಯನ್ನರೂ ಸೇರಿ ಬಹಳಷ್ಟು ಜನರು ಈ ಚಳುವಳಿಯ ವ್ಯಾಪ್ತಿಗೆ ಬರಲಿಲ್ಲ. ಅಖಿಲ ಭಾರತ ರಾಜಕೀಯಕ್ಕೆ ಸಂಬಂಧಿಸಿದ ಹಾಗೇ ಈ ಪರಿಸ್ಥಿತಿ ಇದ್ದ ಮೇಲೆ ಕೇರಳದಲ್ಲಂತೂ ಅದು ಅತೀ ಹೆಚ್ಚಾಗಿಯೇ ಇತ್ತು. ಏಕೆಂದರೆ ಈಗಾಗಲೇ ತಿಳಿಸಿದಂತೆ ಕೇರಳದಲ್ಲಿ ಜಾತಿ, ಉಪಜಾತಿ ಮತ್ತು ಧಾರ್ಮಿಕ ಸಂಸ್ಥೆಗಳು ಜನತೆಯ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಮಹತ್ವವಾದ ಅಂಶಗಳಾಗಿದ್ದವು.

ಜಾತಿ ಮತ್ತು ಧಾರ್ಮಿಕ ಕೋಮುಗಳ ನಡುವೆ ಇದ್ದ ಪರಸ್ಪರ ಸಂಬಂಧ ಮತ್ತು ವರ್ಗ ಮತ್ತು ಆಧುನಿಕ ರಾಜಕೀಯ ಚಳುವಳಿಯ ಪರಸ್ಪರ ಸಂಬಂಧ ಇವು 1921ರ ಮಲಬಾರ್ ದಂಗೆ ಅಥವಾ "ಮಾಪ್ಲೆ ದಂಗೆ" ಯಲ್ಲಿ ತೀವ್ರವಾಗಿ ಗಮನಕ್ಕೆ ಬಂದವು. ಈ ದಂಗೆಯನ್ನು ನಡೆಸಿದ ಅತೃಪ್ತಿ ಅಸಮಾಧಾನಗಳ ಮೂಲವು ಬ್ರಿಟೀಷ್ ಆಡಳಿತ ತಂದ ಕೃಷಿ ಸಂಬಂಧಗಳಲ್ಲಿನ ಬದಲಾವಣೆಯಲ್ಲಿಯೇ ಇತ್ತು. ಯಾವ ನಿರ್ಬಂಧವೂ ಇಲ್ಲದ ಜೆನ್ಮಿಗಳಿಗೆ ಅನುಗ್ರಹಿಸಿದ ಆಸ್ತಿ ಹಕ್ಕು (ಹಾಗೆಂದಾಗ ಗೇಣಿದಾರರು ಜೆನ್ಮಿಗಳ ಕರುಣೆಗೆ ಸದಾ ಪಾತ್ರರಾಗಿರಬೇಕು) ಇಡೀ ಮಲಬಾರ್ ಜಿಲ್ಲೆಯಲ್ಲಿ ತೀವ್ರ ಅಸಮಾಧಾನವನ್ನು ತಂದಿತ್ತು. ಆದರೆ ಇದು ಸ್ಪಷ್ಟವಾದ ಅಭಿವ್ಯಕ್ತಿಯನ್ನು ಪಡೆದಿದ್ದು ಕೇವಲ ಮುಸ್ಲಿಮ್ ರೈತರಲ್ಲಿ ಅಂದರೆ ಮುಸ್ಲಿಮರೇ ಹೆಚ್ಚಾಗಿದ್ದ ಅಂದಿನ ಎರ್ನಾಡ್ ಮತ್ತು ವಲ್ಲುವನಾಡ್ ಪ್ರದೇಶಗಳಲ್ಲಿ ಮಾತ್ರ.

ಹಿಂದೂ ಭೂಮಾಲೀಕರ ಮೇಲೆ ಮುಸ್ಲಿಂ ಗೇಣಿದಾರರಿಂದ ನಡೆದ ಹಲ್ಲೆಗಳು ಕೃಷಿಕರ ಅಸಮಾಧಾನ ಮತ್ತು ಮುಸ್ಲಿಮರ ಕೆಲವು ವಿಶಿಷ್ಟ ಕೊರತೆಗಳನ್ನು ತೋರಿಸಿತು. ಇದರ ಮೊದಲಿಗೆ ನಿಜವಾಗಿ ಹೊರ ಬಂದದ್ದು 1836ರಲ್ಲಿ ಮತ್ತು ಮುಂದಿನ ವರ್ಷಗಳಲ್ಲಿ ಮೇಲಿಂದ ಮೇಲೆ ಇದು ಪುನರಾವರ್ತನೆಗೊಂಡಿತು. ಇದು ಕೃಷಿ ಸಂಬಂಧದ ಆಧಾರದ ಮೇಲೆ ಇದ್ದರೂ ಮುಸ್ಲಿಮರ ಅತಿ ಧರ್ಮಾಂಧತೆಯನ್ನು ಸೂಚಿಸುತ್ತಿತ್ತು. ಬ್ರಿಟಿಷರು ಬಿಗಿಯಾದ ಆಡಳಿತದಿಂದ ಇದನ್ನು ದಮನ ಮಾಡಿದರೂ, ಮುಸ್ಲಿಂ ಜನತೆಯ ಅತೃಪ್ತಿ ಮತ್ತಷ್ಟು ಹೆಚ್ಚಿತು. ಇದು ಇಸ್ಲಾಂ ಐಕ್ಯತೆ ಮತ್ತು ಸಹೋದರತ್ವದ ಬೇರೆಬೇರೆ ರೂಪದಲ್ಲಿ ಅಭಿವ್ಯಕ್ತಿಯನ್ನು ಪಡೆದು ಬ್ರಿಟಿಷ್ ಆಡಳಿತ ಮತ್ತು ಹಿಂದೂಗಳನ್ನು ವಿರೋಧಿಸುವಂತಾಯಿತು.

ಕೃಷಿಕ ಮತ್ತು ಮುಸಲ್ಮಾನರ ಅತೃಪ್ತಿಯ ಹಿನ್ನೆಲೆಯಲ್ಲಿ ಗಾಂಧೀಜಿ ಮತ್ತು ಅಲಿ ಸಹೋದರರ ಮುಂದಾಳತ್ವದಲ್ಲಿ ನಡೆದ ಅಸಹಕಾರ ಖಿಲಾಫತ್ ಚಳುವಳಿ ಕೇರಳದ ಉಳಿದ ಭಾಗಗಳಿಗಿಂತ ಎರ್ನಾಡ್ ಮತ್ತು ವೆಲ್ಲುವನಾಡ್‌ನ ಮುಸ್ಲಿಂ ಜನತೆಯನ್ನು ಹೆಚ್ಚು ಕಲಕಿತು. ಈ ಮಧ್ಯದಲ್ಲಿ ಗೇಣಿಸುಧಾರಣೆಯ ವ್ಯವಸ್ಥಿತ ಚಳುವಳಿ ಒಂದು ನಿರ್ದಿಷ್ಟ ರೂಪವನ್ನು ಪಡೆದಿದ್ದು, ಖಿಲಾಫತ್ ಅಸಹಕಾರ ಚಳುವಳಿಯ ಜೊತೆ ಸೇರಿಕೊಂಡು ಚಳುವಳಿಯನ್ನು ಇನ್ನಷ್ಟು ಬಲಪಡಿಸಿತು. ಬ್ರಿಟೀಷ್ ಆಡಳಿತದಲ್ಲಿದ್ದ ಕೇರಳದಲ್ಲಿ ಜನತೆಯ ನಿಜವಾದ ದಂಗೆ ಮೊದಲು ಇಲ್ಲೇ ಆರಂಭವಾಗಿ, ರಾಜಕೀಯ ಮುಸಲ್ಮಾನ ಮತ್ತು ಕೃಷಿಕ ಅತೃಪ್ತಿಯ ವಿವಿಧ ರೂಪಗಳನ್ನು ತನ್ನಲ್ಲಿ ಒಳಗೊಂಡಿತು.

ಆದ್ದರಿಂದ ಪ್ರಾರಂಭದಲ್ಲಿ ಈ ಚಳುವಳಿ ಆಧುನಿಕ ರಾಜಕೀಯ ಮತ್ತು ಕೃಷಿಕ ಚಳುವಳಿಯ ಎಲ್ಲಾ ಸೂಚನೆಯನ್ನು ಹೊಂದಿದ್ದು, ಎರಡು ಪ್ರಧಾನ ಕೋಮುಗಳನ್ನು ಅಂದರೆ ಹಿಂದೂ ಮತ್ತು ಮುಸಲ್ಮಾನರನ್ನು ಹತ್ತಿರಕ್ಕೆ ತಂದಿತ್ತು. ಆದರೆ ಬ್ರಿಟೀಷ್ ಸರ್ಕಾರವು ಅತಿಯಾಗಿ ದಮನಮಾಡಿ ಎರಡು ತಾಲ್ಲೂಕುಗಳಷ್ಟೇ ಅಲ್ಲದೆ ನೆರೆಯ ನಾಲ್ಕು ತಾಲ್ಲೂಕುಗಳಲ್ಲೂ ಕೂಡ ಮಾರ್ಷಲ್ ಲಾ ವನ್ನು ಘೋಷಿಸಿದ್ದರಿಂದ ಮತ್ತು ಇದರ ಜೊತೆಗೆ ಕಾಂಗ್ರೆಸ್ ನಾಯಕತ್ವವು ರಾಜಕೀಯ ನೀತಿ ಎಲ್ಲಾ ರೀತಿಯಲ್ಲಿಯೂ ಹಿಂಸೆಯನ್ನು ದೂರಸರಿಸಿದ್ದರಿಂದ ನಿಧಾನವಾಗಿ ಮುಸಲ್ಮಾನರು ಹಿಂದೂಗಳ ವಿರುದ್ಧ ತಿರುಗಲು ಕಾರಣವಾಯಿತು. ದಂಗೆಯ ನಾಯಕರು ಹೊಂದಿದ್ದ ಇಸ್ಲಾಂ ಧರ್ಮದ ಅಮೂರ್ತವಾದದ ದೃಷ್ಟಿಕೋನವು ಇದನ್ನು ಇನ್ನಷ್ಟು ಹೆಚ್ಚಿಸಿತು. ಪ್ರಾರಂಭದಲ್ಲಿ ಆಧುನಿಕ ಜಾತ್ಯತೀತ ರಾಜಕೀಯ ಚಳುವಳಿಯಾಗಿದ್ದ ಈ ಬಂಡಾಯ ಮುಂದಿನ ಘಟ್ಟಗಳಲ್ಲಿ ಜಾತೀಯವಾಗಿ ನಿಂತುಹೋಯಿತು.

ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಕೇರಳದ ಭಾಗಗಳಲ್ಲಿ ಕಾಂಗ್ರೆಸ್ ಖಿಲಾಫತ್ ನಾಯಕತ್ವದ ಆಧುನಿಕ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗಳು ಹರಡಿದರೆ ಕೊಚಿನ್ ಮತ್ತು ತಿರುವನಂತಪುರದ ರಾಜಸಂಸ್ಥಾನದಲ್ಲಿ ಮೌನ ನೆಲಸಿತ್ತು. ಹೀಗೆಂದರೆ ಏನೂ ನಡೆಯಲೇ ಇಲ್ಲ ಎಂದಲ್ಲ. ಅಸಹಕಾರ ಚಳುವಳಿ ಈ ರಾಜ್ಯಗಳ ಮೇಲೂ ತಮ್ಮ ಪ್ರಭಾವವನ್ನು ಬೀರಿತು. ಆದರೆ ಅಷ್ಟು ತೀವ್ರವಾಗಿ ಅಲ್ಲ. ಹಿಂದೂಗಳಲ್ಲದ ಕೋಮಿನವರು, ಹಿಂದೂ ಮೇಲ್ಜಾತಿಯಲ್ಲದವರು ಆಡಳಿತವನ್ನು ಬೆಂಬಲಿಸಿ ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ವಿರುದ್ಧವಾಗಿ ನಿಂತರು. ಆದರೆ ಭಾರತದ ಉಳಿದ ಭಾಗಗಳಲ್ಲಿ ಆದ ಪ್ರಜಾಸತ್ತಾತ್ಮಕ ರಾಜಕೀಯ ಚಳುವಳಿಯ ಬೆಳವಣಿಗೆಯು ಕೊಚಿನ್ ಮತ್ತು ತಿರುವಾಂಕೂರಿನ ರಾಜ್ಯಗಳ ಮೇಲೆ ಪ್ರಭಾವವನ್ನು ಬೀರದೆ ಇರಲಾಗಲಿಲ್ಲ. 1920ರ ಉತ್ತರಾರ್ಧ ಮತ್ತು 1930ರ ಪ್ರಾರಂಭದ ಕಾಲ ಎರಡು ಭಿನ್ನ ಚಳುವಳಿಗಳನ್ನು ಕಂಡವು.

ಮೊದಲನೆಯದಾಗಿ, ರಾಜ್ಯಗಳ ಜನತೆಯ ಸಮ್ಮೇಳನದ ರೂಪದಲ್ಲಿ ಆಧುನಿಕ ಜಾತ್ಯತೀತ ರಾಜಕೀಯ ಚಳುವಳಿ ಆರಂಭವಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟವನ್ನು ಪ್ರಾರಂಭಿಸಿತು.

ಎರಡನೆಯದಾಗಿ, ಹಿಂದೂಗಳಲ್ಲದವರು, ಹಿಂದೂ ಮೇಲ್ಜಾತಿಗೆ ಸೇರದವರು, ಮೊದಲು ಕೇಳುತ್ತಿದ್ದ ಹಾಗೆ, ಸರ್ಕಾರಿ ಉದ್ಯೋಗದಲ್ಲಿ ತಮ್ಮ ಪಾಲನ್ನು ಕೇಳುವ ರೂಪದಲ್ಲಿ ಬೇಡಿಕೆಯನ್ನು ಮುಂದಿಡದೆ, ಚುನಾವಣಾ ಹಕ್ಕುಗಳಿಗಾಗಿ, ದೇಶದ ರಾಜಕೀಯ ಜೀವನದಲ್ಲಿ ನೀತಿಯನ್ನು ರೂಪಿಸುವ ವಿಧಾನದಲ್ಲಿ ತಮ್ಮ ಪ್ರಾತಿನಿಧ್ಯವನ್ನು ಒತ್ತಾಯಿಸ ಹತ್ತಿದರು.

ಇಬ್ಬರಿಗೂ ಸ್ಫೂರ್ತಿಯ ಮೂಲವೆಂದರೆ, ಭಾರತದ ರಾಜಕೀಯ ನಾಯಕರು ಮತ್ತು ಬ್ರಿಟಿಷರ ಸರ್ಕಾರದ ನಡುವೆ ನಡೆಯುತ್ತಿದ್ದ ಚರ್ಚೆಗಳು, ಮತ್ತು ಭಾರತೀಯ ರಾಜಕೀಯ ಪಕ್ಷಗಳ ನಡುವೆ ಆಗುತ್ತಿದ್ದ ಮಾತುಕತೆಗಳು. ಇವಲ್ಲದೆ, 1935ರಲ್ಲಿ ಬ್ರಿಟಿಷ್ ಸಂಸತ್ತಿನಿಂದ ಭಾರತದ ಹೊಸ ಸರ್ಕಾರದ ಕಾಯಿದೆ ಹೊರಡುವುದಕ್ಕೆ ದಾರಿಮಾಡಿದ, ಲಂಡನ್ನಿನ ದುಂಡು ಮೇಜಿನ ಪರಿಷತ್ತು, ಸೈಮನ್ ಕಮಿಷನ್, ಕಾಂಗ್ರೆಸ್ ಕರೆದಿದ್ದ ಎಲ್ಲ ರಾಜಕೀಯ ಪಕ್ಷಗಳ ಅಧಿವೇಶನ ಮುಂತಾದುವು.

ಇವೆಲ್ಲವೂ, ಸಾಮಾನ್ಯವಾಗಿ ಮೌನವಾಗಿದ್ದ ರಾಜಸಂಸ್ಥಾನಗಳಲ್ಲೂ ರಾಜಕೀಯ ಬೆಳವಣಿಗೆಯನ್ನು ಶೀಘ್ರಗೊಳಿಸಿದಲ್ಲದೆ, ಹೊಸ ರಾಜಕೀಯ ಆಶಯಗಳು ಜಾತ್ಯತೀತ ರಾಜಕೀಯ ಚಳುವಳಿಯ (ಭಾರತೀಯ ನ್ಯಾಷನಲ್ ಕಾಂಗ್ರೆಸ್ ಮತ್ತು ರಾಜ್ಯಗಳ ಜನತಾ ಅಧಿವೇಶನಗಳು ಪ್ರತಿನಿಧಿಸಿದ್ದ ಹಾಗೆ)ರೂಪದಲ್ಲಿ ಮಾತ್ರವಲ್ಲದೆ, ವಿವಿಧ ಜಾತಿ-ಕೋಮು ಆಧಾರಿತ ರಾಜಕೀಯ ಸಂಸ್ಥೆಗಳ ಚಟುವಟಿಕೆಗಳ ಆರಂಭದಲ್ಲೂ ಅಭಿವ್ಯಕ್ತಿಯನ್ನು ಪಡೆದವು. ಇದು ಕೊನೆಗೆ ತಿರುವಾಂಕೂರಿನಲ್ಲಿ ಜಂಟಿ ರಾಜಕೀಯ ಕಾಂಗ್ರೆಸ್ಸಿನ ರಚನೆಗೆ ದಾರಿಮಾಡಿಕೊಟ್ಟಿತು. ಇದು ನಂತರ ರಾಜ್ಯ ಕಾಂಗ್ರೆಸ್ ಆಯಿತು. ಇದು ಕೊಚ್ಚಿನ್ ಕಾಂಗ್ರೆಸ್, ಕೊಚ್ಚಿನ್ ಸ್ಟೇಟ್ ಕಾಂಗ್ರೆಸ್, ಪ್ರಜಾಮಂಡಲವರ್ ಮುಂತಾದ್ದರ ರಚನೆಗೆ ಪ್ರೇರೇಪಿಸಿತು. ಹಿಂದೂಗಳಲ್ಲದವರು ಮತ್ತು ಮೇಲ್ಜಾತಿ ಹಿಂದೂಗಳಲ್ಲದವರ ಮುಂದಾಳತ್ವದಲ್ಲಿದ್ದ ತಿರುವಾಂಕೂರು ಸ್ಟೇಟ್ ಕಾಂಗ್ರೆಸ್‌ನ್ನು ವಿರೋಧಿಸಿ, ರಾಜ್ಯದ ಆಡಳಿತ ಬಹಿರಂಗ ಬೆಂಬಲದೊಡನೆ ಕಾರ್ಯನಿರ್ವಹಿಸುತ್ತಿದ್ದ, ಜಾತಿ ಹಿಂದೂಗಳ ಮೇಲುಗೈ ಇದ್ದ ತಿರುವಾಂಕೂರು ನ್ಯಾಷನಲ್ ಕಾಂಗ್ರೆಸ್ ಉದಯವಾಯಿತು.

(ಮುಂದುವರೆಯುವುದು)

ಜೀವವಿಮಾ ನೌಕರರಿಂದ ಬೇಡಿಕೆ ದಿನಾಚರಣೆ

ಜೀವವಿಮಾ ನೌಕರರನ್ನು ಬಾಧಿಸುತ್ತಿರುವ ಹತ್ತು ಹಲವು ಸಮಸ್ಯೆಗಳತ್ತ ಆಡಳಿತ ವರ್ಗದ ಹಾಗೂ ಸರಕಾರದ ಗಮನವನ್ನು ಸೆಳೆದು ಕೂಡಲೇ ನೌಕರರ ಪ್ರತಿನಿಧಿಗಳನ್ನು ಮಾತುಕತೆಗಳಿಗೆ ಆಹ್ವಾನಿಸಿ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಲು ವಿಮಾನೌಕರರ ಎಲ್ಲ ಸಂಘಟನೆಗಳು ಇತ್ತ ಕರೆಯ ಮೇರೆಗೆ ದ. ಕ. ಜಿಲ್ಲೆಯ ಉಡುಪಿ ಜೀವವಿಮಾ ನೌಕರರು ಬೇಡಿಕೆಗಳ ದಿನವನ್ನು ಆಚರಿಸಿದರು. ದೇಶಾದ್ಯಂತ ನಡೆದ ಈ ಕಾರ್ಯಕ್ರಮದ ಅಂಗವಾಗಿ ಆ ದಿನ ಸಂಜೆ 5-30ಕ್ಕೆ ಎಲ್ಲ ನೌಕರರ ಸಭೆಯು ಇಲ್ಲಿನ ಎಲ್ಲೈಸಿ ರಿಕ್ರಿಯೇಶನ್ ಕ್ಲಬ್‌ನಲ್ಲಿ ಜರುಗಿತು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಟಿ.ಡಿ. ಶೆಣೈಯವರು ಪ್ರಾಸ್ತಾವಿಕ ಭಾಷಣದಲ್ಲಿ ನೌಕರರ ಐಕ್ಯ ಹೋರಾಟದ ಅಗತ್ಯವನ್ನು ಒತ್ತಿ ಹೇಳಿ 21-7-80 ರಂದು ನಡೆಯುವ ಎರಡು ಗಂಟೆಗಳ ಮುಷ್ಕರವನ್ನು ಯಶಸ್ವಿಗೊಳಿಸಲು ಎಲ್ಲ ನೌಕರರು ಶ್ರಮಿಸಬೇಕೆಂದರು.

ಶ್ರೀ ಪಿ. ವಿಶ್ವನಾಥ ರೈಯವರು ಮಾತನಾಡಿ ವಿಮಾನೌಕರರ ವೇತನ ಮಟ್ಟವನ್ನು ಕಾಯ್ದುಕೊಂಡು ಬರಲು ಆಗಸ್ಟ್ 77ರಷ್ಟು ಹಿಂದೆಯೇ ತಮ್ಮ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದ ವಿಮಾ ನೌಕರರ ಎಲ್ಲ ಸಂಘಟನೆಗಳು ಪರಿಹಾರಕ್ಕಾಗಿ ಪದೇ ಪದೇ ಒತ್ತಾಯಿಸಿದರೂ ಆಡಳಿತವರ್ಗವು ಸರಕಾರದ ಕುಮ್ಮಕ್ಕಿನಿಂದ ಶಾಸ್ತ್ರಕ್ಕಾಗಿ ಮಾತ್ರ ಮಾತುಕತೆಯಾಡುವ ನಾಟಕ ನಡೆಸಿ ಈಗ ಮೌನ ತಳೆದಿದೆಯೆಂದರು. ಸೇವಾ ನಿಬಂಧನೆಗಳನ್ನು ನೌಕರರಿಗೆ ವಿರೋಧವಾಗುವ ರೀತಿಯಲ್ಲಿ ಏಕಪಕ್ಷೀಯವಾಗಿ ಬದಲಾಯಿಸಲಾಗುತ್ತಿದೆ. ಕಳೆದ ಕೆಲವು ವರ್ಷಗಳಿಂದ ವಿಮಾ ವ್ಯವಹಾರ ಏರುತ್ತಿದ್ದರೂ, ಇದು ಕಳೆದ ವರ್ಷ ಶೇಕಡಾ ಮುವತ್ತಮೂರು ವೃದ್ಧಿಗೊಂಡಿದ್ದರೂ ಹೊಸ ನೌಕರರ ನೇಮಕ ಏಕೆ ಆಗುತ್ತಿಲ್ಲ ಎಂದೂ ಪ್ರಶ್ನಿಸಿದರು.

ವಿಮಾನೌಕರರ ಹೋರಾಟದ ಹಿನ್ನೆಲೆಯನ್ನು ವಿವರಿಸಿದ ಶ್ರೀ ಪಿ. ವಿಠ್ಠಲ ಅವರು ಇಂದಿನ ಕಠಿಣ ಪರಿಸ್ಥಿತಿಯಲ್ಲಿ ನೌಕರರು ತಮ್ಮ ಉದಾಸೀನ ಪ್ರವೃತ್ತಿಯನ್ನು ತೊರೆದು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಹೋರಾಟ ಮಾಡಬೇಕೆಂದು ಸ್ಪಷ್ಟಪಡಿಸಿದರು.

ವಿಧಾನಸಭೆಗಳ ಚುನಾವಣಾ ಫಲಿತಾಂಶ

ಒಂದು ವಿಶೇಷ ಸಮೀಕ್ಷೆ

ಹಣ, ಹಿಂಸೆ, ಭ್ರಷ್ಟಾಚಾರ :

1980 ಜನವರಿಯಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಒಂಬತ್ತು ರಾಜ್ಯ ವಿಧಾನಸಭೆಗಳನ್ನು ವಿಸರ್ಜಿಸಿ, ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಹೇರಿತು, ಮುಂದಿನ ಐದುತಿಂಗಳುಗಳಲ್ಲಿ ಈ ರಾಜ್ಯಗಳಲ್ಲಿ ಆಡಳಿತ ಯಂತ್ರವನ್ನು ಇಂದಿರಾ ಕಾಂಗ್ರೆಸ್ ತನ್ನ ಚುನಾವಣಾ ಲಾಭಕ್ಕಾಗಿ ಸಂಪೂರ್ಣ ಬಳಸಿಕೊಂಡಿತು. ಈ ರಾಜ್ಯಗಳಿಂದ ಇಂದಿರಾ ಕಾಂಗ್ರೆಸ್ ತನ್ನ ಸುಮಾರು 2100 ಅಭ್ಯರ್ಥಿಗಳನ್ನು 15,000ಕ್ಕೂ ಹೆಚ್ಚಿನ ತನ್ನೊಳಗಿನ ಪ್ರತಿಸ್ಪರ್ಧಿಗಳ ಅಂತರಿಕ ಪೈಪೋಟಿ, ಹಣದ ಬಲ, ಜನದಬಲ, ಜಾತಿಯಬಲ, ಇತ್ಯಾದಿಗಳನ್ನು ಪರಿಶೀಲಿಸಿ ದೆಹಲಿಯಲ್ಲಿಯೇ ಆರಿಸಿತ್ತು, ಅಭ್ಯರ್ಥಿಗಳನ್ನು ಆಯುವಾಗ ತುರ್ತು ಪರಿಸ್ಥಿತಿಯಲ್ಲಿ ಅತಿರೇಕ ಕೃತ್ಯಗಳಿಗಾಗಿ ಷಾ ಆಯೋಗದಿಂದ ಆಪಾದಿತರಾದವರಿಗೆ, ಸಂಜಯಗಾಂಧಿಯ ಮಾರುತಿ ಕಾರು ಪ್ರಕರಣದ ಹತ್ತಾರು ಅನ್ಯಾಯ ಅಕ್ರಮಗಳಿಗಾಗಿ ಗುಪ್ತಾ ಆಯೋಗದಿಂದ ಆಪಾದಿತರಾದವರಿಗೆ, 'ಕಿಸ್ಸಾ ಕುರ್ಸಿಕಾ' ಚಲನಚಿತ್ರ ನಾಶ ಮಾಡಿದ್ದಕ್ಕಾಗಿ ಆಪಾದಿತರಾದವರಿಗೆ, ವಿಮಾನ ಅಪಹರಣಕಾರರಿಗೆ, ಅಪರಾಧಗಳ ವಿಚಾರಣೆ ನಡೆಯುತ್ತಿದ್ದಾಗ ನ್ಯಾಯಾಲಯಗಳ ಹೊರಗೂ ಒಳಗೂ ದಂಗೆ ದೊಂಬಿ ನಡೆಸಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು! ಮಧ್ಯ ಪ್ರದೇಶದಲ್ಲಿ ಹಿಂದಿನ ರಾಜ ಮನೆತನದವರೂ ಜಹಗೀರುದಾರರೂ ಇಂದಿರಾ ಕಾಂಗ್ರೆಸ್‌ನ ಹೆಚ್ಚಿನ ಅಭ್ಯರ್ಥಿಗಳಾಗಿದ್ದರು!

ಹೆಚ್ಚಿನ ಅಭ್ಯರ್ಥಿಗಳು ವಿಧಾನಸಭಾ ಚುನಾವಣೆಗೆ ತೀರಾ ಹೊಸಬರು, ಅಂತಹವರು ಸಂಜಯಗಾಂಧಿಯ ಕಟ್ಟಾ ಹಿಂಬಾಲಕರೂ, ಪಕ್ಷದ ಹಿರಿಯ ನಾಯಕರ ಮತ್ತು ಕೇಂದ್ರ ಮಂತ್ರಿಗಳ ಮಕ್ಕಳೂ ಅಳಿಯಂದಿರೂ ಆಗಿದ್ದರು, ಈ ಹೊಸ ಪೀಳಿಗೆಯ ಅಭ್ಯರ್ಥಿಗಳು ಇಂದಿರಾಗಾಂಧಿಯ ಮತ್ತು ಸಂಜಯ ಗಾಂಧಿಯ ಹೆಸರಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಅಧಿಕಾರದ ಲಾಭ ಹಂಚಿಕೊಳ್ಳಲು ಎಂತಹ ಅಪರಾಧ ಅಕ್ರಮಗಳಿಗೂ ತಯಾರಿದ್ದರು. ಎಷ್ಟು ಹಣ ಖರ್ಚು ಮಾಡಲೂ ಸಿದ್ಧವಾಗಿದ್ದರು. ಇಂದಿರಾ ಕಾಂಗ್ರೆಸ್‌ನ ಅಭ್ಯರ್ಥಿಗಳನ್ನು ಬೆಂಬಲಿಸಲು, ಭೂಮಾಲಕರು, ಭಾರೀ ವ್ಯಾಪಾರಿಗಳು, ಬಂಡವಾಳಶಾಹಿಗಳು ತಮ್ಮ ಜನ ಹಾಗೂ ಧನ ಸಹಾಯಗಳನ್ನು ಧಾರಳವಾಗಿ ಧಾರೆ ಎರೆಯಲು ಮುಂದೆ ಬಂದರು.

ಚುನಾವಣಾ ಕಾನೂನಿನಂತೆ ವಿಧಾನಸಭೆಯ ಚುನಾವಣೆಗೆ ಒಂದು ಸಣ್ಣ ಕ್ಷೇತ್ರವಾದರೆ ಗರಿಷ್ಟ ರೂ. 25,000 ದಷ್ಟು, ದೊಡ್ಡ ಕ್ಷೇತ್ರವಾದರೆ ಗರಿಷ್ಟ ರೂ. 35,000 ದಷ್ಟು ಖರ್ಚು ಮಾಡಬಹುದಾಗಿದೆ. ಆದರೆ, ಚುನಾವಣಾ ವೇಳೆಯಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯು ಕೆಲವು ರಾಜ್ಯಗಳಲ್ಲಿ ನಡೆಸಿದ ವಿಶೇಷ ಅಧ್ಯಯನದಂತೆ, ಈ ಸಲದ ವಿಧಾನಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ನೀರಿನಂತೆ ಹಣ ಸುರಿದಿರುವುದು ಕಂಡುಬಂದಿದೆ, ಚುನಾವಣಾ ವೆಚ್ಚದಲ್ಲಿ ಕರಪತ್ರ, ಭಿತ್ತಿಪತ್ರ, ಸಭೆ, ಮೆರವಣಿಗೆ, ಜೀಪು, ಕಾರು, ಸ್ವಯಂ ಸೇವಕರು, ಧ್ವನಿವರ್ಧಕ, ಇತ್ಯಾದಿಗಳ ವೆಚ್ಚವಲ್ಲದೆ, ಮತಪೆಟ್ಟಿಗೆಗಳನ್ನು ಅಪಹರಿಸಲು, ದುರ್ಬಲವರ್ಗದವರು ಮತಗಟ್ಟೆಗಳಿಗೆ ಬಾರದಂತೆ ತಡೆಯಲು, ವಿರೋಧ ಪಕ್ಷಗಳ ಚುನಾವಣಾ ಪ್ರಚಾರಗಳನ್ನು ಕೆಡಿಸಲು ಗೂಂಡಾಗಳ ನೇಮಕದ ವೆಚ್ಚವೂ, ಮತದಾರರಿಗೆ ಸೀರೆ, ಬಟ್ಟೆ, ನಗದು ಹಣ, ಕುಡಿತ ಕುಣಿತಗಳಿಗಾಗಿ ಹಣ, ಇತ್ಯಾದಿಗಳನ್ನು ನೀಡಲು ತಗಲುವ ವೆಚ್ಚವೂ ಸೇರಿರುವುದು!

ಇಂತಹ ಅನಧಿಕೃತ ವೆಚ್ಚಗಳಿಗೆ ಕಪ್ಪು ಹಣ ಧಾರಾಳವಾಗಿ ವ್ಯಯಿಸಲಾಗಿದೆ. ಮಧ್ಯಪ್ರದೇಶದಲ್ಲಿ ಕುಡಿತಕ್ಕೇ ಒಂದೊಂದು ಕ್ಷೇತ್ರದಲ್ಲಿ ರೂ. 10,000 ದಿಂದ ರೂ. 50,000 ದವರೆಗೆ ಖರ್ಚು ಮಾಡಲಾಗಿದೆ! ಹೆಚ್ಚಿನ ರಾಜ್ಯಗಳಲ್ಲಿ ಪ್ರತಿಯೊಬ್ಬ ಇಂದಿರಾ ಕಾಂಗ್ರೆಸ್ ಅಭ್ಯರ್ಥಿಯು ಕ್ಷೇತ್ರದಲ್ಲಿಯೂ ಸರಾಸರಿ ರೂ. 1 ಲಕ್ಷಕ್ಕಿಂತಲೂ ಹೆಚ್ಚು ಖರ್ಚು ಮಾಡಲಾಗಿದೆ. ಪಂಜಾಬ್‌ನಲ್ಲಿ ನಿಕಟ ಸ್ಪರ್ಧೆ ಇದ್ದ ಕೆಲವೆಡೆಗಳಲ್ಲಿ ಸರಾಸರಿ ರೂ. 5.10 ಲಕ್ಷಗಳಿಂತಲೂ ಹೆಚ್ಚು ಖರ್ಚು ಮಾಡಲಾಗಿದೆ, ಕೇವಲ 117 ಕ್ಷೇತ್ರಗಳಿರುವ ಈ ರಾಜ್ಯ ಒಂದರಲ್ಲಿಯೇ ಇಂದಿರಾ ಕಾಂಗ್ರೆಸ್ ರೂ. 6-7 ಕೋಟಿ ಹಣ ಖರ್ಚು ಮಾಡಿರುವುದಾಗಿ 'ಇಂಡಿಯನ್ ಎಕ್ಸ್‌ಪ್ರೆಸ್'ನ ವಿಶೇಷ ಅಧ್ಯಯನದಿಂದ ತಿಳಿದುಬಂದಿದೆ. ಒಂದು ಕ್ಷೇತ್ರದ ಚುನಾವಣೆ ಸರಾಸರಿ ರೂ. 1 ಲಕ್ಷ ಖರ್ಚು ಮಾಡಿದ್ದರೂ, 2100 ಕ್ಷೇತ್ರಗಳಿಗೆ ಇಂದಿರಾ ಕಾಂಗ್ರೆಸ್ ಪಕ್ಷವೂ ಅದರ ಅಭ್ಯರ್ಥಿಗಳೂ ಕನಿಷ್ಟ ರೂ. 21 ಕೋಟಿ ಖರ್ಚು ಮಾಡಿರಬೇಕು ಒಂದು ಕ್ಷೇತ್ರಕ್ಕೆ ಸರಾಸರಿ ರೂ. 2 ಲಕ್ಷ ಖರ್ಚು ಮಾಡಿದ್ದರೆ, ಚುನಾವಣೆಗೆ ಒಟ್ಟು ರೂ. 42 ಕೋಟಿ ಖರ್ಚು ಮಾಡಿರಬೇಕು. ಲೋಕಸಭಾ ಚುನಾವಣೆಗೇ ಕೋಟಿಗಟ್ಟಲೆ ಹಣ ಖರ್ಚು ಮಾಡಿದ ಅನತಿಕಾಲದಲ್ಲಿಯೇ ರಾಜ್ಯ ವಿಧಾನಸಭೆಗಳ ಚುನಾವಣೆಗೆ ಸ್ಪರ್ಧಿಸಲು ಇಂದಿರಾ ಕಾಂಗ್ರೆಸ್‌ಗೆ ಇಷ್ಟೊಂದು ಹಣ ಎಲ್ಲಿಂದ ಬಂತು? ಭೂಮಾಲಕರು, ಭಾರೀ ವ್ಯಾಪಾರಿಗಳು, ಬಂಡವಾಳಶಾಹಿಗಳು, ಕಪ್ಪು ಹಣ ಕೂಡಿಟ್ಟವರು ಇಂದಿರಾ ಕಾಂಗ್ರೆಸ್‌ಗೆ ಧಾರಾಳವಾಗಿ ಹಣ ಸಹಾಯ ಮಾಡಿರುವುದರಲ್ಲಿ ಸಂಶಯವಿಲ್ಲ, ಚುನಾವಣಾ ನಂತರ ಅಧಿಕಾರ ಚಲಾಯಿಸಿ ಒಂದಕ್ಕೆ ಹತ್ತರಷ್ಟು ಪುನಃ ಹಣಗಳಿಸುವುದೇ ಅವರ ಉದ್ದೇಶ, ಹಾಗಾದರೆ, ಬೆಲೆ ನಿಯಂತ್ರಿಸುವುದು, ಭ್ರಷ್ಟಾಚಾರ ತಡೆಯುವುದು, ಬಡತನ ನಿವಾರಿಸುವುದು, ಇತ್ಯಾದಿಗಳು ಘೋಷಣೆಗಳಾಗಿಯೇ ಉಳಿಯುವುವು!

ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಡೆದಷ್ಟು ಹಿಂಸಾಕೃತ್ಯಗಳು ಪ್ರಾಯಶಃ ಹಿಂದೆಂದೂ ನಡೆದಿರಲಾರದು. 26-6-80ರ ಯು.ಎನ್.ಐ. ವರದಿಯಂತೆ, ಚುನಾವಣಾ ಪ್ರಚಾರದ ಘರ್ಷಣೆಯಲ್ಲಿ ಮೇ ಒಂದೇ ತಿಂಗಳಲ್ಲಿ 90ಕ್ಕೂ ಹೆಚ್ಚಿನ ಜನರು ಸತ್ತರು. ಅವರಲ್ಲಿ 6 ಮಂದಿ ಅಭ್ಯರ್ಥಿಗಳೇ ಆಗಿದ್ದರು! ಬಿಹಾರ್ ರಾಜ್ಯ ಒಂದರಲ್ಲಿಯೇ 58 ಜನರು ಘರ್ಷಣೆಯಲ್ಲಿ ಸಾವಿಗೀಡಾದರು. ಉ. ಪ್ರದೇಶದಲ್ಲಿ 12, ತಮಿಳುನಾಡಿನಲ್ಲಿ 6, ಗುಜರಾತ್, ಒರಿಸ್ಸಾ ಮತ್ತು ಪಂಜಾಬ್‌ನಲ್ಲಿ ಎರಡೆರಡು. ಮ. ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಒಂದೊಂದು ಜನರು ಸತ್ತರು. ಬಿಹಾರ್ ರಾಜ್ಯದಲ್ಲಂತೂ ಇಷ್ಟು ತನಕ ನಡೆಯದಷ್ಟು ಅತ್ಯಾಚಾರ, ಅಕ್ರಮ, ಮೋಸ, ಭ್ರಷ್ಟಾಚಾರ, ಮತಪೆಟ್ಟಿಗೆ ಅಪಹರಣ, ಆಡಳಿತ ಯಂತ್ರದ ದುರುಪಯೋಗ, ಕೊಲೆ, ಹಿಂಸೆ ನಡೆದು ಚುನಾವಣೆಯ ಅಂತಿಮ ಫಲಿತಾಂಶ ಪ್ರಕಟವಾಗಲು 15 ದಿನಗಳಷ್ಟು ವಿಳಂಬವಾಯಿತು. ಇಷ್ಟೊಂದು ಹಣ, ಹಿಂಸೆ, ಭ್ರಷ್ಟಾಚಾರದಿಂದ ಇಂದಿರಾ ಕಾಂಗ್ರೆಸ್ ಒಂಬತ್ತು ರಾಜ್ಯಗಳಲ್ಲಿ ವಿಧಾನಸಭೆಗಳ ಚುನಾವಣೆಯಲ್ಲಿ ಸ್ಪರ್ಧಿಸಿದುದರ ಫಲಿತಾಂಶವೇನಾಯಿತು?

(ಮುಂದುವರಿಯುವುದು)

—ರಾಂ

ಅಲ್ಪಮತಗಳಿಂದ ಅಧಿಕಾರಕ್ಕೆ :

ವಿಧಾನಸಭೆಗಳ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ತಮಿಳ್ ನಾಡಿನಲ್ಲಿ ಸೋತಿತು, ಪಂಜಾಬ್ ಮತ್ತು ಬಿಹಾರ್ ರಾಜ್ಯಗಳಲ್ಲಿ ಕೆಲವೇ ಸ್ಥಾನಗಳ ಬಹುಮತಗಳಿಸಿ ಅಧಿಕಾರಕ್ಕೆ ಬಂದಿತು. ರಾಜಸ್ಥಾನ, ಮಹಾರಾಷ್ಟ್ರ, ಉ. ಪ್ರದೇಶ, ಮ. ಪ್ರದೇಶ, ಗುಜರಾತ್ ಹಾಗೂ ಒರಿಸ್ಸಾದಲ್ಲಿ ಹೆಚ್ಚಿನ ಸ್ಥಾನಗಳನ್ನು ಗಳಿಸಿ ಅಧಿಕಾರಕ್ಕೆ ಬಂದರೂ ಪ್ರತಿ ರಾಜ್ಯದಲ್ಲೂ ಭಿನ್ನಮತೀಯರ ಗುಂಪುಗಳು ಅಸ್ಥಿರತೆಯನ್ನು ಹೆಚ್ಚಿಸುತ್ತಿವೆ. ಇಂದಿರಾ ಕಾಂಗ್ರೆಸ್‌ನ ಜನಪ್ರಿಯತೆಯು ಜನವರಿ 80ರ ಲೋಕಸಭಾ ಚುನಾವಣೆಗಿಂತ ಮೇ 80ರ ವಿಧಾನಸಭೆಗಳ ಚುನಾವಣೆಯಲ್ಲಿ ಗಣನೀಯವಾಗಿ ಇಳಿಮುಖವಾಗಿರುವುದನ್ನು ಗಮನಿಸಬೇಕು. 1977ರಲ್ಲಿಯೂ ಜನತಾ ಪಕ್ಷವು ಲೋಕಸಭಾ ಚುನಾವಣೆಯ ನಂತರ ತನ್ನ ನಿಷ್ಕ್ರಿಯತೆಯಿಂದಾಗಿ ಕೆಲವೇ ತಿಂಗಳಲ್ಲಿ ನಡೆದ ವಿಧಾನಸಭೆಗಳ ಚುನಾವಣೆಯಲ್ಲಿ ತನ್ನ ಜನಪ್ರಿಯತೆಯನ್ನು ಕಡಿಮೆ ಮಾಡಿಕೊಂಡದ್ದನ್ನು ಇಲ್ಲಿ ಸ್ಮರಿಸಬಹುದು. ಲೋಕಸಭಾ ಚುನಾವಣೆಯಲ್ಲಿ ಒಟ್ಟು ಮತದಾರರ ಶೇ. 55.5 ರಷ್ಟು ಮತದಾನ ಮಾಡಿದ್ದರೆ, ವಿಧಾನಸಭೆಗಳ ಚುನಾವಣೆಯಲ್ಲಿ ಶೇ. 51 ರಷ್ಟೇ ಮತದಾರರು ಮತದಾನ ಮಾಡಿದ್ದಾರೆ. ತಮಿಳ್‌ನಾಡು ಮತ್ತು ಪಂಜಾಬ್ ರಾಜ್ಯಗಳಲ್ಲಿ ಶೇ. 65 ಕ್ಕಿಂತಲೂ ಹೆಚ್ಚಿನ ಮತದಾರರು ಮತದಾನ ಮಾಡಿದ್ದರೆ, ಉಳಿದ ಏಳು ರಾಜ್ಯಗಳಲ್ಲಿ ಶೇ. 45ರಷ್ಟೇ ಜನರು ಮತ ಚಲಾಯಿಸಿದ್ದರು. ತಮಿಳ್‌ನಾಡನ್ನು ಬಿಟ್ಟು ಮಿಕ್ಕ ಎರಡು ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ ಒಟ್ಟು ಮತದಾರರ ಶೇ. 16 ರಿಂದ ಶೇ. 23 ರಷ್ಟೇ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದಿರುವುದನ್ನು ಮರೆಯಬಾರದು.

ಕಳೆದ ವಿಧಾನಸಭೆಗಳ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಆಗಲೀ ಹಿಂದಿನ ಜನತಾ ಪಕ್ಷದ ಘಟಕಗಳಾಗಲೀ ಮತದಾರರಿಗೆ ನಿಜವಾದ ಬದಲಾವಣೆಯ ಮಾರ್ಗವನ್ನು ತೋರಿಸಲು ಅಸಮರ್ಥರಾದುದರಿಂದ, ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಯಲ್ಲಿ ಭಾಗವಹಿಸುವಂತೆ ಮಾಡಲು ವಿಫಲವಾದವು. ಆದರೆ, ತಮಿಳ್‌ನಾಡ್ ಮತ್ತು ಪಂಜಾಬ್ ರಾಜ್ಯಗಳಲ್ಲಿ ಪ್ರಜಾಪ್ರಭುತ್ವವಾದಿ ಪಕ್ಷಗಳಾದ ಅಣ್ಣಾ ಡಿ.ಎಂ.ಕೆ. ಮತ್ತು ಅಕಾಲಿದಳ ಪಕ್ಷಗಳು ಸಿ.ಪಿ.ಐ., ಸಿ.ಪಿ.ಐ.(ಎಂ), ಇತ್ಯಾದಿ ಎಡ ಪಕ್ಷಗಳೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡುದರಿಂದ ಮತದಾರರಿಗೆ ಒಂದು ಸೂಕ್ತ ಬದಲೀ ರಾಜಕೀಯ ಶಕ್ತಿಗಳ ಹಾಗೂ ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳ ಪರಿಚಯವಾಯಿತು. ಆದುದರಿಂದ ಅವರು ಇಂದಿರಾ ಕಾಂಗ್ರೆಸ್ ಮತ್ತು ಜನತಾ ಪಕ್ಷಗಳ ಎಲ್ಲಾ ಘಟಕಗಳನ್ನೂ ಬಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ ಪ್ರಜಾಪ್ರಭುತ್ವವಾದಿ ಮತ್ತು ಎಡ ಪಕ್ಷಗಳ ಐಕ್ಯರಂಗವು ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲುವಂತೆ ಮಾಡಿದರು,

ತಮಿಳ್‌ನಾಡು :

ಈ ರಾಜ್ಯದಲ್ಲಿ ಶೇ. 65ರಷ್ಟು ಮತದಾರರು ಮತದಾನ ಮಾಡಿದ್ದರು, ಅಣ್ಣಾ ಡಿ.ಎಂ.ಕೆ. ಯು ಶೇ. 38.9 ರಷ್ಟು ಮತಗಳಿಸಿ 129 ಸ್ಥಾನಗಳಿಸಿತು. ಸಿ.ಪಿ.ಐ.(ಎಂ) ಶೇ. 3.12 ರಷ್ಟು ಮತಗಳಿಸಿ 11 ಸ್ಥಾನಗಳನ್ನು ಪಡೆಯಿತು. ಸಿ.ಪಿ.ಐ. ಶೇ. 2.82 ರಷ್ಟು ಮತಗಳಿಂದ 10 ಸ್ಥಾನಗಳನ್ನು ಪಡೆಯಿತು. ಒಟ್ಟಿಗೆ 234 ಸ್ಥಾನಗಳಲ್ಲಿ ಅಣ್ಣಾ ಡಿ.ಎಂ.ಕೆ., ಎರಡು ಕಮ್ಯುನಿಸ್ಟ್ ಪಕ್ಷಗಳು ಮತ್ತಿತರ ಎಡ ಹಾಗೂ ಪ್ರಜಾಪ್ರಭುತ್ವವಾದಿ ಪಕ್ಷಗಳು 162 ಸ್ಥಾನಗಳಿಸಿದವು. ಇಂದಿರಾ ಕಾಂಗ್ರೆಸ್ ಮತ್ತು ಡಿ.ಎಂ.ಕೆ. ಮೈತ್ರಿಕೂಟವು ಜನವರಿ 80ರ ಲೋಕಸಭಾ ಚುನಾವಣೆಯಲ್ಲಿ 40 ಸ್ಥಾನಗಳಲ್ಲಿ 38 ಸ್ಥಾನಗಳನ್ನು ಗೆದ್ದು, 202 ವಿಧಾನಸಭಾ ಕ್ಷೇತ್ರಗಳಲ್ಲಿ ಬಹುಮತಗಳಿಸಿದ್ದು, ಮುಂದಿನ ಮೇ 80ರ ವಿಧಾನಸಭಾ ಚುನಾವಣೆಯಲ್ಲಿ ಕೇವಲ 69 ಸ್ಥಾನಗಳನ್ನು ಪಡೆಯುವಂತಾಯ್ತು. ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಶೇ. 31 ಮತಗಳಿಸಿದ್ದರೆ, ವಿಧಾನಸಭಾ ಚುನಾವಣೆಯಲ್ಲಿ ಶೇ. 20.73 ರಷ್ಟು ಮತಗಳಿಸಿದ್ದು, ಶೇ. 10 ರಷ್ಟು ಮತಗಳನ್ನು ಕಳೆದುಕೊಂಡು ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. ಇಂದಿರಾ ಕಾಂಗ್ರೆಸ್ ಒಟ್ಟು ಮತದಾರರ ಕೇವಲ ಶೇ. 13.5 ರಷ್ಟು ಬೆಂಬಲ ಪಡೆಯಿತು. ಡಿ.ಎಂ.ಕೆ.ಯು ರಾಜ್ಯ ಸ್ವಾಯತ್ತತೆಯನ್ನು ಪ್ರತಿಪಾದಿಸುತ್ತಿದ್ದು, 1977ರಲ್ಲಿ ತುರ್ತುಪರಿಸ್ಥಿತಿಯ ವಿರುದ್ಧವಾಗಿದ್ದು, ಈಗ ಕೇಂದ್ರದಲ್ಲಿಯೇ ಎಲ್ಲಾ ಅಧಿಕಾರವನ್ನು ಇಟ್ಟುಕೊಳ್ಳುವ ಸರ್ವಾಧಿಕಾರಿ ಶಕ್ತಿಗಳನ್ನು ಪ್ರತಿನಿಧಿಸುವ ಇಂದಿರಾ ಕಾಂಗ್ರೆಸ್‌ನ ಜೊತೆ ಸಂದರ್ಭ ಸಾಧಕ ಮೈತ್ರಿ ಮಾಡಿಕೊಂಡು ವಿಧಾನಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಯಿತು.

ತಮಿಳ್‌ನಾಡಿನ ಚುನಾವಣೆಯಿಂದ, ಕೇಂದ್ರ-ರಾಜ್ಯಗಳಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿ ಇರಬೇಕಾಗಿಲ್ಲ, ಬೇರೆ ಬೇರೆ ಪಕ್ಷಗಳೂ ಅಧಿಕಾರದಲ್ಲಿರಬಹುದು ಎಂಬ ಒಕ್ಕೂಟ ತತ್ವವನ್ನು ಎತ್ತಿಹಿಡಿದಂತಾಯಿತು, ರಾಜ್ಯಗಳಿಗೆ ಹೆಚ್ಚು ಹಕ್ಕುಬೇಕು, ಸ್ವಾಯತ್ತತೆ ಬೇಕು ಎಂಬ ಪ.ಬಂಗಾಳ, ತ್ರಿಪುರಾ ರಾಜ್ಯಗಳ ಎಡರಂಗ ಸರಕಾರಗಳ ಮತ್ತು ಕೇರಳದ ಪ್ರಜಾಪ್ರಭುತ್ವವಾದಿ ಹಾಗೂ ಎಡ ಪಕ್ಷಗಳ ಸಂಯುಕ್ತರಂಗ ಸರಕಾರದ ಬೇಡಿಕೆಗಳಿಗೆ ತಮಿಳುನಾಡಿನ ಸರಕಾರದಿಂದಲೂ ಬೆಂಬಲ ಸಿಕ್ಕಿದಂತಾಯಿತು.

ಪಂಜಾಬ್ :

ಇಲ್ಲಿ ಶೇ. 64 61ರಷ್ಟು ಮತದಾನ ನಡೆಯಿತು. ಇಂದಿರಾಕಾಂಗ್ರೆಸ್ ಶೇ. 45ಕ್ಕಿಂತಲೂ ಕಡಿಮೆಮತ ಗಳಿಸಿತ್ತು, ಅಂದರೆಒಟ್ಟು ಮತದಾರರ ಕೇವಲ 29.1ರಷ್ಟು ಬೆಂಬಲದಿಂದ 117ಸ್ಥಾನಗಳಲ್ಲಿ 63 ಸ್ಥಾನಗಳನ್ನಷ್ಟೇ ಪಡೆದು ಕೇವಲ 4 ಸ್ಥಾನಗಳ ಬಹುಮತದಿಂದ ಅಧಿಕಾರಕ್ಕೆ ಬಂತು. ಜನವರಿ 80 ರ ಲೋಕಸಭಾಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ 13 ಸ್ಥಾನಗಳಲ್ಲಿ 12

ಸ್ಥಾನಗಳಿಸಿ, 107 ವಿಧಾನಸಭಾಕ್ಷೇತ್ರಗಳಲ್ಲಿ ಬಹುಮತಗಳಿಸಿತ್ತು ಮತ್ತು ಶೇ. 52.45ರಷ್ಟು ಮತಪಡೆದಿತ್ತು. ನಾಲ್ಕು ತಿಂಗಳುಗಳಲ್ಲಿ ಇಂದಿರಾ ಕಾಂಗ್ರೆಸ್‌ನ ಜನಪ್ರಿಯ ಮತಗಳು ಶೇ. 7.5ರಷ್ಟು ಕಡಿಮೆಯಾಯಿತು. ವಿಧಾನಸಭಾ ಚುನಾವಣೆಯಲ್ಲಿ ಅಕಾಲಿದಳ 37 ಸ್ಥಾನಗಳನ್ನೂ, ಸಿ.ಪಿ.ಐ. 9 ಸ್ಥಾನಗಳನ್ನೂ, ಸಿ.ಪಿ.ಐ(ಎಂ) 5ಸ್ಥಾನಗಳನ್ನೂ ಪಡೆದವು. ಇಂದಿರಾಕಾಂಗ್ರೆಸ್ ಹಲವು ಸ್ಥಾನಗಳನ್ನು ಅತ್ಯಲ್ಪ ಮತಗಳ ಬಹುಮತದಿಂದ ಗಳಿಸಿತು. ಮುಖ್ಯಮಂತ್ರಿ ದರ್ಬಾರಾಸಿಂಗ್ ಕೇವಲ 621 ಮತಗಳ ಅಂತರದಿಂದ ಗೆದ್ದರು. ಮುಖ್ಯಮಂತ್ರಿ ಸ್ಥಾನಕ್ಕೆ ಬಡಿದಾಡುತ್ತಿದ್ದ ಅವರ ಪಕ್ಷದವರೇ ಆದ ಜಿ. ಎನ್. ಧಿಲ್ಲಾನ್ ಮತ್ತು ಹೆಚ್. ಎಸ್. ಬ್ರಾರ್ ಇಬ್ಬರೂ ಸೋತರು. 15 ಕ್ಷೇತ್ರಗಳಲ್ಲಿ ಬಂಡುಗಾರ ಅಕಾಲಿದಳದ ಅಭ್ಯರ್ಥಿಗಳೂ ಸ್ಪರ್ಧಿಸಿದ್ದುದರಿಂದಲೂ, ಅಕಾಲಿಗಳಲ್ಲಿ ಐಕ್ಯಮತ್ಯ ಏರ್ಪಟ್ಟದ್ದು ಬಹಳ ತಡವಾದುದರಿಂದಲೂ, ಅವರಲ್ಲಿಯೇ ಕೆಲವರು ಎಡಪಕ್ಷಗಳಬದಲು ಇಂದಿರಾಕಾಂಗ್ರೆಸ್‌ನ ಜೊತೆ ಹೊಂದಾಣಿಕೆಗೆ ಪ್ರಯತ್ನಿಸುತ್ತಿದ್ದುದರಿಂದಲೂ, ಅಂತಿಮವಾಗಿ ಇಂದಿರಾಕಾಂಗ್ರೆಸ್ ಕೇವಲ 4ಸ್ಥಾನಗಳ ಬಹುಮತದಿಂದ ಅಧಿಕಾರಕ್ಕೆ ಬರುವಂತಾಯಿತು ಆದರೆ, ತಮಿಳುನಾಡಿನಂತೆಯೇ ಪಂಜಾಬಿನ ಮತದಾರರಿಗೂ ಇಂದಿರಾ ಕಾಂಗ್ರೆಸ್ ಮತ್ತು ಜನತಾ ಘಟಕ ಪಕ್ಷಗಳನ್ನು ಬಿಟ್ಟು ಪ್ರಜಾಪ್ರಭುತ್ವವಾದಿ ಹಾಗೂ ಎಡಪಕ್ಷಗಳ ಸಂಯುಕ್ತರಂಗವು ಒಂದು ಪ್ರಬಲ ಬದಲೀ ಶಕ್ತಿಯಾಗಿ ಪರಿಣಮಿಸಿತು.

ಬಿಹಾರ್ :

ಈರಾಜ್ಯದಲ್ಲಿಒಟ್ಟು 324 ಸ್ಥಾನಗಳಲ್ಲಿ 320 ಸ್ಥಾನಗಳಿಗೆ ಚುನಾವಣೆ ನಡೆದು 167 ಸ್ಥಾನಗಳನ್ನುಇಂದಿರಾಕಾಂಗ್ರೆಸ್ ಪಡೆದು ಅಧಿಕಾರಕ್ಕೆ ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್‌ಶೇ. 36 4 ಮತಗಳಿಸಿದ್ದರೆ, ವಿಧಾನಸಭಾ ಚುನಾವಣೆಯಲ್ಲಿ ಶೇ. 34.14 ಮತಗಳಿಸಿತ್ತು. ಬಿಹಾರದಲ್ಲಿ ಇಂದಿರಾ ಕಾಂಗ್ರೆಸ್ ಕೆಲವೇ ಸ್ಥಾನಗಳ ಬಹುಮತ ಪಡೆದಾದರೂ ಅಧಿಕಾರಕ್ಕೆ ಬರುವಂತಾಗಲು ಎಡಪಕ್ಷೇತರ ವಿರೋಧ ಪಕ್ಷಗಳ ಅನೈಕ್ಯತೆಯೇ ಕಾರಣ 264 ಸ್ಥಾನಗಳಿಗೆ ಲೋಕದಳ, 187 ಸ್ಥಾನಗಳಿಗೆ ಕಾಂಗ್ರೆಸ್(ಯು), 258 ಸ್ಥಾನಗಳಿಗೆ ಜನತಾ(ಜೆ ಪಿ) ಸ್ಪರ್ಧಿಸಿದ್ದು ಕೇವಲ ಅನುಕ್ರಮವಾಗಿ 42.14, ಮತ್ತು 13 ಸ್ಥಾನಗಳಿಸಿದವು. 225 ಸ್ಥಾನಗಳಿಗೆ ಸ್ಪರ್ಧಿಸಿದ ಜನತಾ (ರಾಜನಾರಾಯಣ್) ಕೇವಲ ಒಂದು ಸ್ಥಾನಗಳಿಸಿತು. ಇಂದಿರಾ ಕಾಂಗ್ರೆಸ್ ಮತ್ತು ಎಡ ಪಕ್ಷೇತರ ವಿರೋಧ ಪಕ್ಷಗಳು ಜಾತೀಯತೆಯನ್ನು ಬಡಿದೆಬ್ಬಿಸಿದವು ವಿರೋಧ ಪಕ್ಷಗಳು ಎಡ ಪಕ್ಷಗಳೊಂದಿಗೆ ಹೊಂದಾಣಿಕೆಗೆ ಒಪ್ಪಲಿಲ್ಲ ಇಂದಿರಾ ಕಾಂಗ್ರೆಸ್‌ನ್ನು, ಸರ್ವಾಧಿಕಾರಿ ಶಕ್ತಿಯನ್ನು ಸೋಲಿಸುವ ಏಕೈಕ ಗುರಿ ಈ ವಿರೋಧ ಪಕ್ಷಗಳಿಗಿರಲಿಲ್ಲ ತಮ್ಮತಮ್ಮೊಳಗಾದರೂ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಕಾರಣ, ಈ ವಿರೋಧ ಪಕ್ಷಗಳ ಒಟ್ಟು ಮತಗಳು ಶೇ. 48 06 ರಿಂದ ಶೇ. 38.53ಕ್ಕೆ ನಾಲ್ಕು ತಿಂಗಳ ಅವಧಿಯಲ್ಲಿ ಇಳಿಯಿತು. ಆದರೆ, ಸಿ. ಪಿ ಐ. (ಎಂ) ಈ ಚುನಾವಣೆಯಲ್ಲಿ ಶೇ. 0.94ರಿಂದ ಶೇ. 6.55ರಷ್ಟು ಮತಗಳನ್ನು ಹೆಚ್ಚಿಸಿ 4ರಿಂದ 6 ಸ್ಥಾನಗಳನ್ನು ಹೆಚ್ಚಿಸಿಕೊಂಡಿತು. ಸಿ. ಪಿ. ಐ. ಶೇ. 1.84 ರಿಂದ ಶೇ. 9.6ರಷ್ಟು ಮತಗಳನ್ನು ಹೆಚ್ಚಿಸಿ 21ರಿಂದ 23 ಸ್ಥಾನಗಳನ್ನು ಹೆಚ್ಚಿಸಿಕೊಂಡಿತು.

ಇತರ ವಿರೋಧ ಪಕ್ಷಗಳು ತಮ್ಮ ಪರಸ್ಪರ ಪ್ರತಿಸ್ಪರ್ಧಿಗಳನ್ನು ಸೋಲಿಸಿದ್ದೇ ಅಲ್ಲದೆ, ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ)ನ ಅಭ್ಯರ್ಥಿಗಳೂ ಕೆಲವೆಡೆಗಳಲ್ಲಿ ಸೋಲುವಂತಾಯಿತು. ಸಿ.ಪಿ.ಐ.136 ಸ್ಥಾನಗಳಿಗೆ ಸ್ಪರ್ಧಿಸುವ ಬದಲು 70-75ಸ್ಥಾನಗಳಿಗೆ ಸ್ಪರ್ಧಿಸಿದ್ದರೆ, ಅದು ಇನ್ನೂ 10 ಸ್ಥಾನಗಳನ್ನು ಗಳಿಸಬಹುದಾಗಿತ್ತು. ವಿರೋಧ ಪಕ್ಷಗಳು ಇನ್ನೂಹೆಚ್ಚು ಸ್ಥಾನಗಳಿಸಬಹುದಾಗಿತ್ತು. ಹಾಗೆಯೇ ಇಂದಿರಾ ಕಾಂಗ್ರೆಸ್ ಇನ್ನಷ್ಟೂ ಹೆಚ್ಚಿನ ಸ್ಥಾನಗಳನ್ನು ಕಳೆದುಕೊಂಡು ಅಧಿಕಾರಕ್ಕೆ ಬಾರದಂತೆ ಮಾಡಬಹುದಾಗಿತ್ತು. ಆದರೂ, ಬಿಹಾರದ ಜನರೂ ಇಂದಿರಾ ಕಾಂಗ್ರೆಸ್ ಮತ್ತು ಜನತಾ ಆಡಳಿತದಿಂದ ಬೇಸತ್ತಿದ್ದಾರೆ. ಕೇರಳ, ಪ. ಬಂಗಾಳ, ತ್ರಿಪುರಾ ರಾಜ್ಯಗಳ ಪುರೋಗಾಮಿ ಸರಕಾರಗಳ ಸಾಧನೆಗಳ ಬಗ್ಗೆ ಆಕರ್ಷಿತರಾಗಿದ್ದಾರೆ ಎಂದು ವಿಧಾನಸಭಾ ಚುನಾವಣೆಯಿಂದ ಸ್ಪಷ್ಟವಾಗಿ ತಿಳಿದುಬಂದಿದೆ.

ಒರಿಸ್ಸಾ :

ಇಲ್ಲಿ 146 ಸ್ಥಾನಗಳಲ್ಲಿ ಇಂದಿರಾ ಕಾಂಗ್ರೆಸ್ 117 ಸ್ಥಾನಗಳಿಸಿತು. ಇಲ್ಲಿ ಶೇ.40ರಷ್ಟೇ ಮತದಾನ ನಡೆದಿದ್ದು ಎಲ್ಲಾ ರಾಜ್ಯಗಳಿಗಿಂತ ಅತ್ಯಂತ ಕಡಿಮೆಯಾಗಿದೆ. ಇಂದಿರಾ ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ ಶೇ. 55.69ರಷ್ಟು ಮತಗಳಿಸಿ 20ರಲ್ಲಿ 19 ಸ್ಥಾನ ಪಡೆದು, 143 ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿತ್ತು. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಶೇ. 47.94ರಷ್ಟು (ಒಟ್ಟು ಮತದಾರರ ಶೇ.19.2ರಷ್ಟು) ಮತ ಪಡೆದು, ತನ್ನ ಜನಪ್ರಿಯ ಮತಗಳಲ್ಲಿ ಶೇ. 7.75 ರಷ್ಟು ಕಳೆದುಕೊಂಡಿತು. ವಿರೋಧ ಪಕ್ಷಗಳಲ್ಲಿ ಬಿಕ್ಕಟ್ಟಿದ್ದರೆ, ಅವುಗಳು ಇನ್ನೂ 54 ಸ್ಥಾನಗಳನ್ನು ಪಡೆಯಬಹುದಾಗಿತ್ತು.

ಮಧ್ಯ ಪ್ರದೇಶ :

ಇಲ್ಲಿ ಕೇವಲ ಶೇ. 46ರಷ್ಟು ಮತದಾನ ನಡೆದಿದೆ. ಇಂದಿರಾ ಕಾಂಗ್ರೆಸ್‌ಗೆ ಶೇ. 46 4ರಷ್ಟು ಮತ ಸಿಕ್ಕಿದೆ, ಅಂದರೆ ಒಟ್ಟು ಮತದಾರರ ಶೇ. 21.3ರಷ್ಟೇ ಬೆಂಬಲ ಸಿಕ್ಕಿದೆ.

ಉ.ಪ್ರದೇಶ :

ಇಲ್ಲಿ ಶೇ. 44.89ರಷ್ಟು ಮತದಾನ ನಡೆದಿದ್ದು, ಇಂದಿರಾ ಕಾಂಗ್ರೆಸ್ ಶೇ. 37.59ರಷ್ಟು ಅಂದರೆ ಒಟ್ಟು ಮತದಾರರ ಶೇ. 16 9ರಷ್ಟು ಬೆಂಬಲ ಪಡೆದಿದೆ. ಜನತಾ ಪಕ್ಷದ ನಾಲ್ಕು ಘಟಕಗಳು ಒಟ್ಟಿಗೆ ಶೇ. 39.22ರಷ್ಟು ಮತ ಪಡೆದಿದ್ದರೂ ಒಟ್ಟು ಸ್ಥಾನಗಳಲ್ಲಿ ¼ ರಷ್ಟೂ ಸ್ಥಾನಗಳನ್ನು ಪಡೆಯಲು ವಿಫಲವಾದವು.

ರಾಜಸ್ಥಾನ :

ಇಲ್ಲಿ ಶೇ. 52.14ರಷ್ಟು ಮತದಾನ ನಡೆದಿದ್ದು, ಇಂದಿರಾ ಕಾಂಗ್ರೆಸ್ ಶೇ. 42 96 ಮತಗಳಿಸಿದ್ದು, ಅಂದರೆ ಒಟ್ಟು ಮತದಾರರ ಶೇ. 22.4ರಷ್ಟೇ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿದೆ.

ಮಹಾರಾಷ್ಟ್ರ :

ಇಲ್ಲಿ ಕೇವಲ ಶೇ. 50ರಷ್ಟು ಮತದಾನವಾಗಿತ್ತು. 1978ರ ವಿಧಾನಸಭಾ ಚುನಾವಣೆಯಲ್ಲಿ ಶೇ. 60.72 ರಷ್ಟು ಮತದಾನವಾಗಿತ್ತು. ಮುಂಬಯಿ ನಗರದಲ್ಲಿ 1978ರಲ್ಲಿ ಶೇ. 62ರಷ್ಟು ಮತದಾನ ನಡೆದು ಇಂದಿರಾ ಕಾಂಗ್ರೆಸ್ ಹೊರತಾದ ಇತರ ಪಕ್ಷಗಳ 34ಅಭ್ಯರ್ಥಿಗಳು ಆರಿಸಿ ಬಂದಿದ್ದರು. ಆದರೆ ಮೇ 80ರ ಚುನಾವಣೆಯಲ್ಲಿ ಮುಂಬಯಿಯಲ್ಲಿ ಕೇವಲ ಶೇ. 37 ರಷ್ಟು ಮತದಾನ ನಡೆಯಿತು! 34 ಸ್ಥಾನಗಳಲ್ಲಿ 26 ಸ್ಥಾನಗಳನ್ನು ಇಂದಿರಾ ಕಾಂಗ್ರೆಸ್ ಗೆಲ್ಲುವಂತಾಯಿತು. ವಿರೋಧ ಪಕ್ಷಗಳಲ್ಲಿ ಬಿಕ್ಕಟ್ಟಿಲ್ಲದೆ ಇದ್ದುದೇ ಇದಕ್ಕೆ ಕಾರಣ. ಪರಿಣಾಮವಾಗಿ, 86 ಸ್ಥಾನಗಳಲ್ಲಿ ಇಂದಿರಾ ಕಾಂಗ್ರೆಸ್ ಬಹಳ ಕಡಿಮೆ ಮತಗಳ ಅಂತರದಿಂದ ಗೆಲ್ಲುವಂತಾಯಿತು. ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ 237 ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿದ್ದು, ವಿಧಾನಸಭಾ ಚುನಾವಣೆಯಲ್ಲಿ 186 ಸ್ಥಾನಗಳನ್ನಷ್ಟೇ ಗೆದ್ದುಕೊಂಡು, 51 ಸ್ಥಾನಗಳಲ್ಲಿ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. ಅದರ ಮತಗಳಿಕೆ ಶೇ 53.30ರಿಂದ ಶೇ. 44.48ಕ್ಕಿಳಿಯಿತು. ಎಡ ಹಾಗೂ ಪ್ರಜಾಪ್ರಭುತ್ವವಾದಿ ಬದಲೀ ಶಕ್ತಿಗಳು ಈ ರಾಜ್ಯದಲ್ಲಿ ಪ್ರಬಲವಾಗದೇ ಇದ್ದುದರಿಂದ ಮತದಾರರು ಚುನಾವಣೆಯಲ್ಲಿ ಆಸಕ್ತಿ ತೋರಿಸುತ್ತಿಲ್ಲ.

ಗುಜರಾತ್ :

ಇಲ್ಲಿ ಕೇವಲ ಶೇ. 46ರಷ್ಟು ಮತದಾನ ನಡೆದಿತ್ತು. ಇಂದಿರಾ ಕಾಂಗ್ರೆಸ್‌ನ ಮತಗಳಿಕೆಯು ಜನವರಿ 80ರಿಂದ ಮೇ 80ರ ಅವಧಿಯಲ್ಲಿ ಶೇ. 55 ರಿಂದ ಶೇ. 51ಕ್ಕಿಳಿಯಿತು. ಅಂದರೆ, ಈ ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್ ಒಟ್ಟು ಮತದಾರರ ಶೇ. 23.5ರಷ್ಟೇ ಬೆಂಬಲ ಪಡೆದು ಅಧಿಕಾರಕ್ಕೆ ಬಂದಿದೆ.

ಅಸ್ಥಿರತೆ, ನಿಷ್ಕ್ರಿಯತೆ :

ಅಲ್ಪಮತಗಳಿಂದ ಕೇಂದ್ರ ಮತ್ತು ಎರಡು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಇಂದಿರಾಕಾಂಗ್ರೆಸ್ ಸರಕಾರಗಳು ಅಸ್ಥಿರತೆಯಿಂದ ನಿಷ್ಕ್ರಿಯವಾಗಿವೆ. ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ಇನ್ನೂ ಮಂತ್ರಿಮಂಡಳಿ ರಚನೆಯ ಕೆಲಸ ಮುಗಿಯಲೇ ಇಲ್ಲ. ರಾಜ್ಯಗಳಲ್ಲಿ ಅಪೂರ್ಣ ಮಂತ್ರಿಮಂಡಳಿ ರಚಿಸಲಿಕ್ಕೂ ಕೆಲವು ವಾರಗಳ ವಿಳಂಬವಾಯಿತು. ಉ. ಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ವಿಧಾನಸಭೆಗಳ ಅಧ್ಯಕ್ಷರನ್ನು ಆರಿಸಲು ಒಂದು ತಿಂಗಳಿಗಿಂತಲೂ ಹೆಚ್ಚು ವಿಳಂಬವಾಗಿ, ವಿಷಯ ರಾಜ್ಯಸಭೆಯಲ್ಲಿಯೂ ಚರ್ಚೆಗೆ ಬಂತು. ಪ್ರತಿ ರಾಜ್ಯಗಳಲ್ಲಿಯೂ ಗುಂಪುಗಾರಿಕೆಯು ಹೆಚ್ಚುತ್ತಿದ್ದು ಇಂದಿರಾಕಾಂಗ್ರೆಸ್‌ನ ವಿರುದ್ಧ ಗುಂಪುಗಳು ದೆಹಲಿಗೆ ಭೇಟಿ ಕೊಡುವುದು ಹೆಚ್ಚಾಗುತ್ತಿದೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಗುಂಡೂರಾವ್ ವಿರುದ್ಧ 22 ಅಂಶ ಅಪಾದನೆಗಳು ಅವರ ಪಕ್ಷದ ವಿರುದ್ಧ ಗುಂಪಿನವರಿಂದ ಸಿದ್ಧವಾಗುತ್ತಿದೆ. ಆಂಧ್ರದಲ್ಲಿ ಚೆನ್ನಾರೆಡ್ಡಿಯ ಮಂತ್ರಿಮಂಡಳಿಯನ್ನುರುಳಿಸಲು ಈಗಾಗಲೇ ಕೆಲವು ಮಂತ್ರಿಗಳು ರಾಜಿನಾಮೆ ಕೊಟ್ಟಿದ್ದಾರೆ. ಅನೇಕ ಶಾಸಕರು ತಮ್ಮ ಬೆಂಬಲ ಹಿಂತೆಗೆದುಕೊಂಡಿದ್ದಾರೆ. ಸಂಜಯಗಾಂಧಿಯ ಅಕಾಲ ಮರಣದಿಂದಾಗಿ, ಅನೇಕ ಲೋಕಸಭಾ ಸದಸ್ಯರಿಗೂ, ವಿಧಾನಸಭಾ ಸದಸ್ಯರಿಗೂ, ಕೇಂದ್ರ ಮತ್ತು ರಾಜ್ಯಗಳ ಮಂತ್ರಿಗಳಿಗೂ ನೆಲೆಯೇ ಇಲ್ಲದಂತಾಗಿದೆ!

ಹೊಸ ಪರಿಸ್ಥಿತಿಯಲ್ಲಿ ಹರಿಯಾಣದಲ್ಲಿ ಭಜನ್‌ಲಾಲ್, ಮಹಾರಾಷ್ಟ್ರದಲ್ಲಿ ಎ. ಆರ್. ಅಂತುಳೆ, ರಾಜಸ್ಥಾನದಲ್ಲಿ ಜಗನ್ನಾಥ ಪಹಾಡಿಯಾ, ಮ. ಪ್ರದೇಶದಲ್ಲಿ ಅರ್ಜುನ್‌ಸಿಂಗ್, ಬಿಹಾರದಲ್ಲಿ ಜಗನ್ನಾಥಮಿಶ್ರ, ಒರಿಸ್ಸಾದಲ್ಲಿ ಜೆ. ಬಿ. ಪಾಟ್ನಾಯಕ, ಉ. ಪ್ರದೇಶದಲ್ಲಿ ವಿಶ್ವನಾಥ ಪ್ರತಾಪ್‌ಸಿಂಗ್ ಇವರ ಮಂತ್ರಿಮಂಡಳಿಗಳು ಸಂಜಯಗಾಂಧಿಯ ಮರಣಾನಂತರ ಭಿನ್ನಮತೀಯರ ಒತ್ತಡದಿಂದಾಗಿ ಅಸ್ಥಿರತೆಗೊಳಗಾಗಿದ್ದು, ನಿಷ್ಕ್ರಿಯವಾಗಿವೆ. ಸುಭದ್ರ ಸರಕಾರಕೊಡುವ ಇಂದಿರಾಕಾಂಗ್ರೆಸ್‌ನ ಆಶ್ವಾಸನೆ ಸುಳ್ಳಾಗುತ್ತಿದೆ. ಬೆಲೆಏರಿಕೆ, ಹಣದುಬ್ಬರ, ಅವಶ್ಯ ವಸ್ತುಗಳ ಕೊರತೆ, ನಿರುದ್ಯೋಗ, ಬಡತನ ಮುಂತಾದ ಸಮಸ್ಯೆಗಳು ಗಂಭೀರವಾಗುತ್ತಿವೆ. ಹರಿಜನರ ಮೇಲೆ, ಅಲ್ಪಮತೀಯರ ಮೇಲೆ, ಮಹಿಳೆಯರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿವೆ. ಜನರು ಇಂದಿರಾ ಕಾಂಗ್ರೆಸ್‌ನಲ್ಲಿಯೂ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ.

ಬಂಡವಾಳಶಾಹಿ ಸಮಾಜ ವ್ಯವಸ್ಥೆಯಲ್ಲಿ ಅದೇ ವರ್ಗದಿಂದ ಪ್ರಬಲ ವಿರೋಧಿ ಪಕ್ಷ ಬೆಳೆಯುವುದು ದುಃಸಾಧ್ಯ ಎಂದು ಇದು ತನಕದ ಅನುಭವದಿಂದ ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವವಾದಿ ಪಕ್ಷಗಳು ಎಡಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡರೇನೇ, ಐಕ್ಯಹೋರಾಟದಿಂದ ಆಳುವ ಪಕ್ಷವನ್ನು ಸೋಲಿಸಬಹುದು, ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಬಹುದು. ಇಂತಹ ಬದಲೀ ರಾಜಕೀಯ ಶಕ್ತಿ ಮತ್ತು ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳು ಪ. ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳಂತೆಯೇ ತಮಿಳ್‌ನಾಡು, ಪಂಜಾಬ್, ಬಿಹಾರ್ ರಾಜ್ಯಗಳಲ್ಲಿ ಜನಪ್ರಿಯವಾಗುತ್ತಿವೆ.

(ಮುಗಿಯಿತು)

'ರಾಂ'

ಉಪ್ಪಳ ಪೋಸ್ಟಾಫೀಸಿನ ಮುಂಭಾಗದಲ್ಲಿ ಧರಣಿ

ಕೇರಳದ ಎಡ ಪ್ರಜಾಪ್ರಭುತ್ವ ಐಕ್ಯರಂಗದ ಸರಕಾರದೊಡನೆ ಕೇಂದ್ರ ಸರಕಾರ ತೋರಿಸುವ ಅಸಹಕಾರವನ್ನು ನಿಲ್ಲಿಸುವಂತೆಯೂ, ಕೇರಳದ ನಿರುದ್ಯೋಗ ಪ್ರಶ್ನೆಯನ್ನು ನಿವಾರಿಸಲು ಅವಶ್ಯವಿರುವ ಸಹಾಯಗಳನ್ನು ಕೇಂದ್ರ ಒದಗಿಸಿಕೊಡುವಂತೆಯೂ, ಭಾರತದಾದ್ಯಂತ ಉದ್ಯೋಗವಿಲ್ಲದೆ ಅಲೆಯುವ ನಿರುದ್ಯೋಗಿಗಳಿಗೆ ಜೀವಿಸಲಿಕ್ಕೋಸ್ಕರ ಕನಿಷ್ಟ ರೂ. 50 ವಾದರೂ ನಿರುದ್ಯೋಗ ಭತ್ತೆಯಾಗಿ ಕೇಂದ್ರಸರಕಾರ ಘೋಷಿಸಬೇಕಾಗಿಯೂ, ಸರಕಾರೀ ಉದ್ಯಮ ರಂಗದಲ್ಲಿ ತೆರವಿರುವ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳನ್ನು ಕೂಡಲೇ ನೇಮಿಸಬೇಕೆಂದೂ, ಹೊಸ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದೂ, ರಾಷ್ಟ್ರವನ್ನೇ ಅಪಘಡಕ್ಕೆ ತಳ್ಳುವ ಅಸ್ಸಾಂ ಚಳುವಳಿಯನ್ನು ಹಿಂತೆಗೆಯುವಂತೆ ಮಾಡಿ ಅದಕ್ಕೊಂದು ರಾಜಕೀಯ ಪರಿಹಾರವನ್ನು ಕಂಡುಹಿಡಿಯಲು ಕೇಂದ್ರ ಸರಕಾರ ಕೂಡಲೇ ಗಮನಹರಿಸಬೇಕು ಮುಂತಾದ ಕೇಳಿಕೆಗಳನ್ನಿಟ್ಟುಕೊಂಡು ತಾ. 10-7-80ರಂದು ಕೇರಳ ರಾಜ್ಯದಾದ್ಯಂತ ಎಲ್ಲಾ ಕೇಂದ್ರ ಸರಕಾರೀ ಕಛೇರಿಗಳ ಮುಂದೆ ಕೇರಳ ಸೋಷಲಿಸ್ಟ್ ಯುವಜನ ಫೆಡರೇಷನ್ನಿನವರ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲ್ಪಟ್ಟಿತು.

ಇದರ ಅಂಗವಾಗಿ ಮಂಜೇಶ್ವರ ಕೆ.ಎಸ್.ವೈ.ಎಫ್. ಬ್ಲಾಕು ಕಮಿಟಿಯ ನೇತೃತ್ವದಲ್ಲಿ ಉಪ್ಪಳ ಪೋಸ್ಟ್ ಆಫೀಸಿನ ಮುಂಭಾಗದಲ್ಲಿ ನಡೆದ ಧರಣಿ ಸತ್ಯಾಗ್ರಹವನ್ನು ಕಾಂ. ಬಿ. ಎಂ. ರಾಮಯ್ಯಶೆಟ್ಟಿಯವರು ಉದ್ಘಾಟಿಸಿದರು. ಕೇರಳ ಸೋಷಲಿಸ್ಟ್ ಯುವಜನ ಫೆಡರೇಷನ್ ಕಣ್ಣಾನ್ನೂರು ಜಿಲ್ಲಾ ಸದಸ್ಯ ಕಾಂ. ಯು. ವಸಂತನವರು ಸ್ವಾಗತಿಸಿದರು.

ಮೇಲಿನ ಕೇಳಿಕೆಗಳ ಪ್ರಚಾರಾರ್ಥವಾಗಿ ತಾ. 6-7-80ರಂದು ಮಂಜೇಶ್ವರದ ಎಲ್ಲಾ ಭಾಗಗಳಲ್ಲೂ ಕಾಲ್ನಡೆ ಜಾಥಾ ಕಾಂ. ಬಿ. ಎಂ. ನಾರಾಯಣನವರ ನೇತೃತ್ವದಲ್ಲಿ ಪ್ರಕಟನೆ ಮಾಡಿತು.

o

ಬೆಲೆಯೇರಿಕೆ ವಿರುದ್ಧ ಬಿಜಾಪುರ ಬಂದ್ ಆಚರಣೆ

ಅತ್ಯಾವಶ್ಯಕ ವಸ್ತುಗಳ, ಬಸ್, ರೈಲ್ವೆ, ಪಠ್ಯಪುಸ್ತಕ, ಎಕ್ಸೈಸ್ ಪುಸ್ತಕಗಳ ಬೆಲೆಯೇರಿಕೆ ವಿರೋಧಿಸಿ ಹಾಗೂ ಬಿಜಾಪುರ ನಗರಕ್ಕೆ ಸರಿಯಾಗಿ ಕುಡಿಯುವ ನೀರು ಸರಬರಾಜಾಗಬೇಕೆಂದು ಬೇಡಿ ತಾ.16ರಂದು ಬಿಜಾಪುರ ಬಂದ್ ಆಚರಿಸಿ ನಾಗರೀಕರ ಪ್ರತಿಭಟನೆ ವ್ಯಕ್ತಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಕಮ್ಯುನಿಸ್ಟ್ ಪಾರ್ಟಿ, ಜನತಾ ಪಾರ್ಟಿ, ಅರಸು ಕಾಂಗ್ರೆಸ್, ಭಾರತೀಯ ಜನತಾ ಪಾರ್ಟಿ, ರಿಪಬ್ಲಿಕನ್ ಪಾರ್ಟಿ ಕರೆಕೊಟ್ಟಿತ್ತು. ಏಕೀಕರಣ ಚಳುವಳಿಯ ನಂತರ ಮೊದಲ ಬಾರಿ ವಿರೋಧಿ ಪಕ್ಷಗಳ ಈ ಕರೆಗೆ ಬಿಜಾಪುರ ಜನತೆ ಸಂಪೂರ್ಣ ಬೆಂಬಲ ತೋರಿಸಿದರು. ಇಡೀ ಬಿಜಾಪುರ ನಗರದ ಎಲ್ಲಾ ವ್ಯವಹಾರ, ವಾಹತುಕಗಳಷ್ಟೇ ಅಲ್ಲದೆ, ಸಿನಿಮಾ, ಜಿನ್ನಿಂಗ್ ಕಾರ್ಖಾನೆ, ಇಂಡಸ್ಟ್ರಿಯಲ್ ಎಸ್ಟೇಟ್ ನೂಲಿನ ಗಿರಣಿ, ಚಾಗಲೆ ಕಾರ್ಖಾನೆ, ಶಾಲೆ–ಕಾಲೇಜುಗಳೆಲ್ಲ ಬಂದಾಗಿದ್ದವು, ಕಾರ್ಮಿಕರೂ, ವಿದ್ಯಾರ್ಥಿಗಳೂ, ಯುವಕರೆಲ್ಲ ಬೇರೆಬೇರೆ ಕಡೆಗಳಿಂದ ಮೆರವಣಿಗೆ ತೆಗೆದು ಬಸ್ ಸರ್ವಿಸ್‌ಗಳನ್ನು ಬಂದುಮಾಡಿಸಿದ್ದರು. ರೈತಸಂಘದ ಡೋಲ, ಕಾರ್ಮಿಕರ ಘೋಷಣೆ, ಬಂಡಾಯ ಸಾಹಿತ್ಯದ ಫಲಕ, ಸಾರ್ವಜನಿಕರ ಉತ್ಸಾಹಗಳೊಂದಿಗೆ ಹತ್ತು ಸಾವಿರ ಜನರ ಮೆರವಣಿಗೆ ಸಿದ್ದೇಶ್ವರ ಗುಡಿಯಿಂದ ಹೊರಟು 5–30ಕ್ಕೆ ಡಿ.ಸಿ. ಆಫೀಸಿನ ಆವಾರದಲ್ಲಿ ಸೇರಿ ಜಿಲ್ಲಾಧಿಕಾರಿಗಳಿಗೆ ಬೇಡಿಕೆಯ ಮನವಿಯನ್ನು ವಿರೋಧಿ ಪಕ್ಷಗಳ ಪರವಾಗಿ ಅರ್ಪಿಸಲಾಯಿತು. ಆನಂತರ ಬಸವೇಶ್ವರ ಸರ್ಕಲಿನಲ್ಲಿ ಪ್ರೊ. ಗಣಾಚಾರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಎನ್. ಕೆ. ಉಪಾಧ್ಯಾಯ (ಸಿ.ಪಿ.ಎಂ.), ಎಲ್. ಬಿ. ಲಾಯದಗುಂದಿ (ಸಿ.ಪಿ.ಎಂ.), ಸಿ. ನಾಗರಾಣ (ಜನತಾ), ವಾಸಣ್ಣ ದೇಸಾಯಿ (ಅರಸು ಕಾಂ.), ಡಾ. ಮಹೇಂದ್ರಕರ (ಬಿಜೆಪಿ) ಬಾಬುರೆಡ್ಡಿ ತುಂಗಳ (ಎ.ಐ.ಟಿ.ಯು.ಸಿ.), ಭೀಮಸಿ ಕಲಾದಗಿ (ರೈತಸಂಘ) ಮೊದಲಾದವರು ಭಾಷಣ ಮಾಡಿ ಇಂದಿರಾ ಸರಕಾರದ ಬೆಲೆಯೇರಿಕೆ ನೀತಿಯನ್ನು ಖಂಡಿಸಿ, ಜನತೆ ಒಗ್ಗಟ್ಟಾಗಿ ಅದನ್ನು ಪ್ರತಿಭಟಿಸಿದ್ದಾಗ ಅಭಿನಂದನೆ ಸಲ್ಲಿಸಿದರು. ಇಂದಿರಾ ಸರ್ವಾಧಿ ಶಕ್ತಿಯನ್ನು ಅದರ ಜನವಿರೋಧಿ ನೀತಿಯನ್ನು ಎದುರಿಸಲು ಎಲ್ಲಾ ವಿರೋಧಿ ಪಕ್ಷಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಒಂದಾಗಿ ಐಕ್ಯಹೋರಾಟ ನಡೆಸಬೇಕೆಂದು ಕರೆಯಿತ್ತರು. ಜನತಾ ಪಾರ್ಟಿಯ ಅಧ್ಯಕ್ಷ ಐ.ಸಿ. ನಾಗರಾಣ ವಕೀಲರು ಈ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖ ಪಾತ್ರ ವಹಿಸಿದ್ದರು. ಈ ಬಂದ ಕಾರ್ಯಕ್ರಮದಲ್ಲಿ ರೈತರನ್ನು ಸಮಾವೇಶಗೊಳಿಸಿ ರೈತರ ಸಮಸ್ಯೆಗಳನ್ನು ಎತ್ತಿತೋರಿಸುವಂತೆ ಮಾಡಿದರು ಭೀಮಸಿ ಕಲಾದಗಿಯವರು. ಚಿಕ್ಕಪುಟ್ಟ ವ್ಯಾಪಾರಸ್ಥರು, ಟಾಂಗಾ, ಆಟೋರಿಕ್ಷಾ, ಸೈಕಲ್ ರಿಕ್ಷಾ, ಬೀಡಿ, ನೂಲಿನ ಗಿರಣಿ, ಜಿನ್ನಿಂಗ್ ಫ್ಯಾಕ್ಟರಿ ಮತ್ತಿತರ ಕಾರ್ಮಿಕರೆಲ್ಲ ಈ ಸಮುದಾಯದಲ್ಲಿ ಒಂದಾಗುವಂತೆ ಮಾಡಿದ ಯಶಸ್ಸು ಜಿಕ್ರಿಯಾಸಾಬ್ ಕಾಲೇಬಾಗ, ವಿ.ಎಂ. ಸೊನ್ನದ, ಎಲ್.ಬಿ. ಲಾಯದಗುಂದಿ, ಚಂಚಲಕರ, ಬಾಬುರೆಡ್ಡಿ ತುಂಗಳ, ಮೆಹಬೂಬ ಪಾಶಾ, ಇನಾಮದಾರ ಅವರಿಗೆಲ್ಲಾ ಸಲ್ಲುತ್ತದೆ.

●

ಒಲಿಂಪಿಕ್ಸ್ ಅತಿಥಿಯಾಗಿ ಎಸ್. ಎಫ್. ಐ. ಅಧ್ಯಕ್ಷ ಎಂ. ಎ. ಬೇಬಿ

ಸೋವಿಯತ್ ರಷ್ಯಾದ ಆಹ್ವಾನದ ಮೇರೆಗೆ ಮಾಸ್ಕೋದಲ್ಲಿ ನಡೆಯಲಿರುವ "ಒಲಿಂಪಿಕ್ಸ್"ಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಪರವಾಗಿ ಎಸ್.ಎಫ್.ಐ. ಅಧ್ಯಕ್ಷರಾದ ಕಾಂ. ಎಂ.ಎ. ಬೇಬಿಯವರನ್ನು ಅತಿಥಿಯಾಗಿ ಕಳುಹಿಸಲು ಕೇಂದ್ರ ಸಮಿತಿಯು ತೀರ್ಮಾನಿಸಿದೆ.

ಜುಲೈ 17ರಂದು ದೆಹಲಿಯಿಂದ ಹೊರಟಿರುವ ಬೇಬಿಯವರಿಗೆ ಕರ್ನಾಟಕ ರಾಜ್ಯ ಶಾಖೆಯ ಪರವಾಗಿ ಪ್ರಧಾನಕಾರ್ಯದರ್ಶಿ ಎಸ್.ಆರ್. ಆರಾಧ್ಯ ಶುಭ ಕೋರಿದ್ದಾರೆ.

ಕುಂಬಳೆ ಬ್ಲೋಕು–ಮೂರ್ತೆ ಕೆಲಸಗಾರರ ಯೂನಿಯನ್ ಮಹಾಸಭೆ

ಕಾಸರಗೋಡು ತಾಲ್ಲೂಕು ಕುಂಬಳೆ ಬ್ಲೋಕಿನ ಚೆತ್ತು ತೊಳಿಲಾಳಿ (ಮೂರ್ತೆ ಕೆಲಸಗಾರರ) ಯೂನಿಯನಿನ ಮಹಾಸಭೆ ತಾ. 14–7–80 ರಂದು ಬೆಳಿಗ್ಗೆ ಮಂಜೇಶ್ವರ ಪಾರ್ಟಿ ಆಫೀಸಿನಲ್ಲಿ ಕಾಂ. ಕೆ. ಮಾಧವನವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನಿನ ಕಾರ್ಯದರ್ಶಿಯವರಾದ ಕಾಂ. ಯು. ವಸಂತನವರು ಸಭೆಯನ್ನು ಸ್ವಾಗತಿಸುತ್ತಾ ಮೂರ್ತೆ ಕಂಟ್ರಾಕ್ಟುದಾರರ ಶೋಷಣೆಯ ಕಪಿಮುಷ್ಟಿಯಿಂದ ಬಿಡುಗಡೆಗೊಳ್ಳಲು ಎಲ್ಲಾ ಮೂರ್ತೆ ಕೆಲಸಗಾರರು ಒಗ್ಗಟ್ಟಿನಲ್ಲಿ ಹೋರಾಡಬೇಕಾದ ಅವಶ್ಯಕತೆಯನ್ನು ವಿವರಿಸಿದರು,

ಸಭೆಯಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಏರಿಯಾ ಕಮಿಟಿ ಕಾರ್ಯದರ್ಶಿ ಕಾಂ. ಕೇಳುನ್ನಾಯರ್ ಮತ್ತು ಪಕ್ಷದ ಕಣ್ಣಾನ್ನೂರು ಜಿಲ್ಲಾ ಸದಸ್ಯ ಕಾಂ. ಬಿ. ಎಂ. ರಾಮಯ್ಯ ಶೆಟ್ಟಿಯವರು ಮಾತನಾಡುತ್ತಾ ಸರಕಾರ 13 ವರ್ಷಗಳ ಹಿಂದೆಯೇ ಮೂರ್ತೆ ಕೆಲಸಗಾರರಿಗೆ ಕೆಲವೊಂದು ಅನುಕೂಲತೆಗಳನ್ನು ಒದಗಿಸಿಕೊಟ್ಟರೂ, ಅದನ್ನು ಕಾಸರಗೋಡು ತಾಲ್ಲೂಕಿನ ಕುಂಬಳೆ – ಮಂಜೇಶ್ವರ ವಿಭಾಗದಲ್ಲಿ ಇನ್ನೂ ಕೊಡದೆ ಕಂಟ್ರಾಕ್ಟುದಾರರ ಶೋಷಣೆಗೆ ಪ್ರದೇಶದ ಕೆಲಸಗಾರರು ಬಲಿಯಾಗಿರುತ್ತಾರೆ. ಆದುದರಿಂದ ಇದಕ್ಕೊಂದು ಹೋರಾಟದ ಮಾರ್ಗವನ್ನು ಕಂಡುಹಿಡಿದು ತಮಗೆ ಸಿಗಲೇಬೇಕಾದ ಸವಲತ್ತುಗಳನ್ನು ಪಡೆಕೊಳ್ಳಲು ಐಕ್ಯಶಕ್ತಿಯನ್ನು ಬೆಳೆಸಬೇಕೆಂದು ಕರೆಯಿತ್ತರು.

ಸಭೆಯ ಚರ್ಚೆಯ ನಂತರ, ಸರಕಾರ ಅಂಗೀಕರಿಸಿದ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂಬ ಕೇಳಿಕೆ ಪತ್ರವನ್ನು ಎಲ್ಲಾ ಕಂಟ್ರಾಕ್ಟುದಾರರಿಗೂ, ಸಂಬಂಧಪಟ್ಟ ಇತರರಿಗೂ ಕೊಡಲು ತೀರ್ಮಾನಿಸಲಾಯಿತು. ಯೂನಿಯನನ್ನು ರಿಜಿಸ್ಟರ್ ಮಾಡಲಿಕ್ಕಾಗಿ 7 ಮಂದಿಯ ಕಮಿಟಿಯೊಂದನ್ನು ರಚಿಸಲಾಯಿತು. ಮುಂದಿನ ವರ್ಷದ ಕಾರ್ಯಕಲಾಪಗಳನ್ನು ನೋಡಲಿಕ್ಕಾಗಿ ಕಾಂ ಬಿ. ವಾಸುರವರು ಅಧ್ಯಕ್ಷರಾಗಿಯೂ, ಕಾಂ. ಯು. ವಸಂತ ಕಾರ್ಯದರ್ಶಿಯವರಾಗಿಯೂ, ಕಾಂ ಬಿ.ಎಂ ರಾಮಯ್ಯ ಶೆಟ್ಟಿ ಕೋಶಾಧಿಕಾರಿಯಾಗಿಯೂ ಇರುವ 11 ಮಂದಿಯ ಕಮಿಟಿಯನ್ನು ರಚಿಸಲಾಯಿತು.

ಈ ಸಭೆಯಲ್ಲಿ ಸಾಧಾರಣ 100 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

●

ಬೀಡಿ ಫೆಡರೇಷನ್ನಿನ ಜಿಲ್ಲಾ ಸಮಿತಿಯ ರಚನೆ

20-7-80ರಂದು ತುಮಕೂರು ಜಿಲ್ಲೆಯ ವಿವಿಧ ಭಾಗಗಳ ಬೀಡಿ ಕಾರ್ಮಿಕರ ಪ್ರತಿನಿಧಿಗಳ ಸಭೆಯನ್ನು ಸೇರಿಸಿ ಜಿಲ್ಲಾ ಸಮಿತಿಯನ್ನು ರಚಿಸಲಾಗಿದೆ.

ಕಾಂ. ಕೆ. ಆರ್. ನಾಯಕ್‌ರವರನ್ನು ಅಧ್ಯಕ್ಷರನ್ನಾಗಿ ಆರಿಸಿರುವ ಜಿಲ್ಲಾ ಸಮಿತಿಯಲ್ಲಿ, ಮಹಮದ್ ದಸ್ತಗೀರ್, ಅಬ್ದುಲ್ ಅಲೀವರ್, ಪಲೀಮಾಬೇಗಂ, ವಜೀರ್, ಹಬೀಬ್ ಉಲ್ಲಾ, ಫಯಾಜ್ ಅಹಮದ್, ಮದಾರ್ ಸಾಬ್, ಪೈಯೆದ್ ಅನ್ವರ್, ಟಿ. ವಜೀರ್, ಅಹಮದ್, ರಜಿಯಾ ಬೇಗಂ ಹಾಗೂ ಬಾಬು ಅವರುಗಳು ಜಿಲ್ಲಾ ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಲಾಗಿದೆ.

ಈ ಸಭೆಯನ್ನುದ್ದೇಶಿಸಿ ಗಲ್ಬರ್ಗಾದ ಕಾರ್ಮಿಕ ಮುಖಂಡ ಕಾಂ. ಖಾನ್ ಸಾಹೇಬರು, ಕಾರ್ಮಿಕ ಸಂಘಟನೆಯ ಅಗತ್ಯತೆ ಹಾಗೂ ಹೋರಾಟಗಳ ಬಗ್ಗೆ ಮಾತನಾಡಿದರು.

ಸಭೆಯಲ್ಲಿ ಹಾಜರಿದ್ದ ರಾಜ್ಯ ರೈತ ಸಂಘ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಪಿ. ರಾಮಚಂದ್ರರಾಯರು ಕರ್ನಾಟಕ ಸರಕಾರ ಕಾರ್ಮಿಕರ ಮೇಲೆ ಹೇರಲು ಉದ್ದೇಶಿಸಿರುವ ಅಗತ್ಯಸೇವಾ ಕಾಯ್ದೆಗಳ ವಿರುದ್ಧ ಹೋರಾಟ ನಡೆಸಬೇಕಿರುವ ಅವಶ್ಯಕತೆಯನ್ನು ವಿವರಿಸಿ, ಕಾರ್ಮಿಕರ ಜಂಟಿ ಕ್ರಿಯಾ ಸಮಿತಿಯ 18-8-80ರ ಸಾರ್ವತ್ರಿಕ ಮುಷ್ಕರದಲ್ಲಿ ಸಕ್ರಿಯಭಾಗವಹಿಸಿ ಸಂಪೂರ್ಣ ಯಶಸ್ವಿಗೊಳಿಸಬೇಕೆಂದು ಒತ್ತಿ ಹೇಳಿದರು.

●

ಕೊಡ್ಲಮೊಗರು ವಾಣಿ ವಿಜಯ ಹೈಸ್ಕೂಲು ಎಸ್.ಎಫ್.ಐ. ವಿಜಯ

ಕಾಸರಗೋಡು ತಾಲ್ಲೂಕು ಕೊಡ್ಲಮೊಗರು ವಾಣಿ ವಿಜಯ ಹೈಸ್ಕೂಲಲ್ಲಿ ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ. ಅಭ್ಯರ್ಥಿಗಳಾದ ಶ್ರೀ ರವಿನಾಥ ಶೆಟ್ಟಿ ಶಾಲಾ ನಾಯಕನಾಗಿಯೂ, ಶ್ರೀ ವಿಶ್ವನಾಥ ಶೆಟ್ಟಿ ಉಪ ಶಾಲಾ ನಾಯಕನಾಗಿಯೂ ಆರಿಸಲ್ಪಟ್ಟರು. ಈ ಇಬ್ಬರಿಗೂ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕೊಡ್ಲಮೊಗರು ಕಮಿಟಿ ಹಾಗೂ ಕೇರಳ ಸೋಷಲಿಸ್ಟ್ ಯುವಜನ ಫೆಡರೇಷನ್ನಿನ ಕೊಡ್ಲಮೊಗರು ಕಮಿಟಿ ತಮ್ಮ ಅಭಿನಂದನೆಗಳನ್ನು ವ್ಯಕ್ತಪಡಿಸಿರುವರು.

●

ಬರಗಾಲ ಪೀಡಿತ ಜನರ ಪರಿಹಾರಕ್ಕೆ ತುಮಕೂರು ಜಿಲ್ಲಾ ರೈತಸಂಘದ ಒತ್ತಾಯ

ದಿ. 19–7–80ರಂದು ತುಮಕೂರು ಜಿಲ್ಲಾ ರೈತಸಂಘದ ಸಭೆಯು ಅಧ್ಯಕ್ಷರಾದ ಕಾಮ್ರೇಡ್ ವಿ. ಚಿಕ್ಕವೀರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸೀಮೆಗೊಬ್ಬರದ ಬೆಲೆಯು ಜಾಸ್ತಿಮಾಡಿರುವುದನ್ನು ತಕ್ಷಣ ತಗ್ಗಿಸುವಂತೆ ಸರಕಾರವನ್ನು ಒತ್ತಾಯಿಸಿತು. ಜಿಲ್ಲೆಯಾದ್ಯಂತ ಮಳೆಬಾರದೆ ರಾಗಿ ವಗೈರೆ ಬಿತ್ತನೆ ಆಗದೆ ಅನೇಕ ಕಡೆ ಕುಡಿಯಲೂ ನೀರಿಲ್ಲದೆ ಇರುವ ಪರಿಸ್ಥಿತಿ ಉಂಟಾಗಿರುವುದನ್ನು ಈ ಸಭೆ ತೀವ್ರ ಕಳವಳವನ್ನು ವ್ಯಕ್ತಪಡಿಸಿ ಈ ಬಗ್ಗೆ ಕೂಡಲೇ ಪರಿಹಾರ ಕಾರ್ಯವನ್ನು ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಿತು.

ದೊಡ್ಡಬಳ್ಳಾಪುರದಲ್ಲಿ ನಡೆಯುವ ಕರ್ನಾಟಕರಾಜ್ಯ ರೈತತರಬೇತಿ ಶಿಬಿರಕ್ಕೆ ಈ ಜಿಲ್ಲೆಯಿಂದ 15 ಜನ ಹೋಗತಕ್ಕದೆಂದು ತೀರ್ಮಾನಿಸಲಾಯಿತು.

ಬಗರ್ ಹುಕುಂ ಸಾಗುವಳಿ ಮಾಡಿರುವ ಬಡರೈತರಿಗೆ ಒಂದು ತಿಂಗಳು ಒಳಗಾಗಿ ಜಮೀನು ಮಂಜೂರು ಚೀಟಿ ಕೊಡದೇ ಹೋದರೆ ಮುಂದಿನ ತಿಂಗಳ ಅಂತ್ಯದ ವೇಳೆಗೆ ಜಿಲ್ಲಾಧಿಕಾರಿ ಕಛೇರಿ ಮುಂದೆ ಚಳುವಳಿ ನಡೆಸತಕ್ಕದೆಂದು ತೀರ್ಮಾನಿಸಲಾಯಿತು.

●

ಮೈಸೂರಲ್ಲಿ ಯುವಜನ ಸಂಘಟನೆ

ತಾ. 10-7-80ರಂದು ಮೈಸೂರಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕಛೇರಿಯಲ್ಲಿ ಯುವಕರ ಮತ್ತು ಪಕ್ಷದ ಹಿತೈಷಿಗಳ ಒಂದು ಸಭೆ ನಡೆಯಿತು. ಈ ಸಭೆಯಲ್ಲಿ ಮೈಸೂರಿನಲ್ಲಿ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಶಾಖೆಯನ್ನು ಪ್ರಾರಂಭಿಸುವ ಬಗ್ಗೆ ಚರ್ಚೆ ನಡೆಸಲಾಯಿತು. ಮೈಸೂರಿನಲ್ಲಿ ಈ ಸಂಘಟನೆ ಮಾಡಲು ಕಾಂ. ಮೋಹನ್ ಕುಮಾರ್‌ರವರನ್ನು ಸಂಚಾಲಕರನ್ನಾಗಿಯೂ, ಕಾಂ. ಜಗನ್ನಾಥ್, ಮಹೇಶ್, ಮುರಳೀಧರ್, ನಾಗರಾಜು ಅವರನ್ನೊಳಗೊಂಡ ತಾತ್ಕಾಲಿಕ ಸಮಿತಿಯನ್ನು ಆರಿಸಲಾಯಿತು.

○

ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಕಾಂ. ಶ್ರೀಯಾನ್

ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿಯವರು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಪಿ. ರಾಮಚಂದ್ರರಾವ್ ಇವರು ರಾಜ್ಯಮಟ್ಟ ರೈತಸಂಘಟನೆ ಮತ್ತು ಪಾರ್ಟಿ ಕೆಲಸಗಳಿಗೆ ಗಮನ ಕೊಡುವುದು ಸಾಧ್ಯವಾಗುವಂತೆ ಮಾಡಲು ಇವರು ಪಾರ್ಟಿಯ ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸ್ಥಾನವನ್ನು ಬಿಟ್ಟಿರುವರು. ಪಾರ್ಟಿಯ ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸ್ಥಾನಕ್ಕೆ ಕಾಂ. ಕೆ. ಆರ್. ಶ್ರೀಯಾನ್ ಇವರನ್ನು ಸರ್ವಾನುಮತದಿಂದ ಆರಿಸಲಾಗಿದೆ. ಕಾಂ. ಶ್ರೀಯಾನ್ ಇವರು ಪಕ್ಷದ ರಾಜ್ಯಸಮಿತಿ ಸದಸ್ಯರಾಗಿರುವರು.

ಚಂದಾ ವಿವರ

ಬಿಡಿಪ್ರತಿ	:	50 ಪೈಸೆ
6 ತಿಂಗಳಿಗೆ	:	13 ರೂ.
ಒಂದು ವರ್ಷಕ್ಕೆ	:	25 ರೂ.

ಹೋಟೆಲ್ ಕಾರ್ಮಿಕರ ವಿಜಯ

ಯಶವಂತಪುರದ ಹೋಟೆಲ್ ಕಿನೋದಲ್ಲಿ 24 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಮಾಲೀಕನು ತಾ. 16-8-1980ರಂದು ಹೇಳದೆ ತನ್ನ ಹೋಟೆಲ್ ಲಾಕ್‌ಔಟ್ ಮಾಡಿದ್ದನು. ಈ ವಿಚಾರದಲ್ಲಿ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘ ಲೇಬರ್ ಆಫೀಸಿನಲ್ಲಿ ದೂರು ಸಲ್ಲಿಸಿ ಮಾತುಕತೆ ಮೂಲಕ ತೀರ್ಮಾನ ಮಾಡಲು ಪ್ರಯತ್ನಿಸಿತು, ಕಾರ್ಮಿಕರು ಹೋಟೆಲ್ ಎದುರು ಮುಷ್ಕರ ಪ್ರಾರಂಭಿಸಿ ಮುಚ್ಚಿದ ಹೋಟೆಲ್ ತೆಗೆದು ಎಲ್ಲ ಕಾರ್ಮಿಕರಿಗೂ ಕೆಲಸ ಕೊಡಬೇಕೆಂದು ಒತ್ತಾಯಿಸಿದರು. ಈ ವಿಚಾರದಲ್ಲಿ ಮಾಲೀಕರ ಸಂಘದ ಜಂಟಿ ಕಾರ್ಯದರ್ಶಿಯವರು ಸಹ ಮಧ್ಯ ಪ್ರವೇಶಿಸಿ ಮಾತುಕತೆ ಪ್ರಾರಂಭವಾಯಿತು, ಮಾಲೀಕರು ತಾ.27-7-80ರಂದು ಹೋಟೆಲ್ ಪ್ರಾರಂಭ ಮಾಡಿ 6ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಒಪ್ಪಿದರು. ಉಳಿದೊಬ್ಬನಿಗೆ ರೂ. 1200/- ಪರಿಹಾರ ತಕ್ಷಣವೇ ಪಾವತಿ ಮಾಡಿದ. ಮಾಲೀಕರೂ ಮತ್ತು ಸಂಘದವರೂ ತಾವು ಕೊಟ್ಟಿರುವ ಎಲ್ಲಾ ದೂರುಗಳನ್ನು ವಾಪಸ್ಸು ಪಡೆಯುವುದಾಗಿ ಒಪ್ಪಂದ ಮಾಡಲಾಯಿತು.

ಗ್ರ್ಯಾಂಡ್‌ವ್ಯಾಷನಲ್ ಹೋಟೆಲ್ ಕಾರ್ಮಿಕರ ಹೋರಾಟ ಇಂದಿಗೆ 66 ದಿವಸಗಳನ್ನು ಮುಟ್ಟಿದೆ. ಮಾಲೀಕರು ಈ ಹೋಟೆಲ್ ಬೀಗಮುದ್ರೆ ತೆಗೆಯುವುದಿಲ್ಲವೆಂದು ಹಟಹಿಡಿದಿದ್ದಾರೆ. ಬೇರೆಯವರಿಗೆ ಈ ಹೋಟೆಲ್ ಮಾರಲು ಸನ್ನಾಹ ನಡೆದಿದೆಯೆಂದು ತಿಳಿದಿದೆ. ಕಾರ್ಮಿಕ ಸಂಘಟನೆಯ ವಿರೋಧಿಯಾದ ಮಾಲೀಕರು ಕಾರ್ಮಿಕರಿಗೆ ತೊಂದರೆ ಮಾಡಲು ಈ ರೀತಿ ಮಾಡಿದ್ದಾರೆ. ಕಾರ್ಮಿಕರೂ ಸಹ ಎಲ್ಲ ಕಷ್ಟಗಳನ್ನು ಸಹಿಸಿ ಜಯಸಿಗುವವರೆಗೂ ಹೋರಾಟ ಮಾಡಲು ನಿರ್ಧರಿಸಿದ್ದಾರೆ. ಈ ಹೋರಾಟಕ್ಕೆ ಎಲ್ಲ ಸಾಮೂಹಿಕ ಸಂಘಟನೆಗಳ ಪೂರ್ಣ ಸಹಕಾರವನ್ನು ಹೋಟೆಲ್ ಕಾರ್ಮಿಕರ ಮುಖಂಡ ಕಾಂ. ಇ. ಕೆ. ಎನ್. ರಾಜನ್ ಕೋರಿದ್ದಾರೆ.

●

ಸ್ಮಶಾನ ವ್ಯವಸ್ಥೆ ಸರಿಪಡಿಸಲು ಒತ್ತಾಯ

ಶಿವಮೊಗ್ಗ ನಗರದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸೀಗೆಹಟ್ಟಿ ಶಾಖೆಯ ನಿಯೋಗವು ಕಲ್ಲಟ್ಟಿ ಸ್ಮಶಾನದ ವ್ಯವಸ್ಥೆಯನ್ನು ಉತ್ತಮಪಡಿಸುವುದನ್ನು ಒತ್ತಾಯಿಸುವ ಮನವಿಯನ್ನು ಸೀಗೆಹಟ್ಟಿ, ಮಂಡ್ಲಿ ಮತ್ತು ಮಾರ್ನಮಿ ಬೈಲ್ ಬಡಾವಣೆಗಳ ಜನರ ಸಹಿ ಮಾಡಿಸಿ ನಗರ ಸಭಾಧ್ಯಕ್ಷರಿಗೆ ಅರ್ಪಿಸಿತು. ಕಾಂ. ಶಿವಶಂಕರ್ ನೇತೃತ್ವವಹಿಸಿದ ಈ ನಿಯೋಗಕ್ಕೆ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ನಗರಸಭಾಧ್ಯಕ್ಷರು ಆಶ್ವಾಸನೆ ಇತ್ತಿರುವರು.

●

ರೈಲ್ವೆ ಸಚಿವರಿಗೆ ಪ್ರಯಾಣಿಕರ ಮನವಿ

ಮಂಗಳೂರು ನಗರದ ರೈಲ್ವೆ ನಿಲ್ದಾಣದಿಂದ ರಾತ್ರಿ 9-25ಕ್ಕೆ ಹೊರಡುವ 536ನೇ ನಂಬರಿನ ರೈಲು ಮತ್ತು ಮಧ್ಯಾಹ್ನ 4 ಗಂಟೆಗೆ ಕೋಜಿಕೋಡ್‌ನಿಂದ ಮಂಗಳೂರಿಗೆ ಬರುವ 515ನೇ ನಂಬರಿನ ರೈಲು ಈಗ ತೊಕ್ಕೋಟಿನ ನಿಲ್ದಾಣದಲ್ಲಿ ನಿಲ್ಲುವುದಿಲ್ಲ. ಎರಡು ವರ್ಷಗಳಿಗೆ ಹಿಂದೆ ತೊಕ್ಕೋಟು-ಮಂಗಳೂರಿನ ರೈಲು ಸೀಸನ್ ಟಿಕೇಟಿನ ದರ ಉಳ್ಳಾಲ-ಮಂಗಳೂರಿನದಕ್ಕಿಂತ ಕಡಿಮೆ ಇತ್ತು. ಈಗ ಎರಡೂ ಒಂದೇ ಆಗಿರುವುದರಿಂದ ಪ್ರಯಾಣಿಕರು ಉಳ್ಳಾಲ-ಮಂಗಳೂರಿನ ಸೀಸನ್ ಟಿಕೇಟ್ ಕೊಳ್ಳುತ್ತಿದ್ದಾರೆ. ರೈಲ್ವೆ ಖಾತೆಯವರು ಈಗ ತೊಕ್ಕೋಟಿಗೆ ಪ್ರಯಾಣಿಕರೇ ಇಲ್ಲವೆಂದು ಬಗೆದು ತೊಕ್ಕೋಟು ನಿಲ್ದಾಣದಲ್ಲಿ ರೈಲು ನಿಲ್ಲಿಸುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಇದಲ್ಲದೆ ಕಾಸರಗೋಡು, ಕಣ್ಣಾನೂರಿನಿಂದ ಬರುವ ರೈಲುಗಳಿಂದಲೂ ಪ್ರಯಾಣಿಕರಿಗೆ ಪ್ರಯೋಜನವಿಲ್ಲ. ಸಾರ್ವಜನಿಕರ ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಪ್ರಯಾಣಿಕರು ರೈಲ್ವೆ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

●

ಗೋಲೀಬಾರನ್ನು ಖಂಡಿಸಿ ಮೌನ ಮೆರವಣಿಗೆ

ಇತ್ತೀಚೆಗೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕ್‌ನಲ್ಲಿ ನಡೆದ ಪೋಲೀಸು ಗೋಲಿಬಾರನ್ನು ಖಂಡಿಸಿ, ಸತ್ತವರ ಕುಟುಂಬಕ್ಕೆ ಪರಿಹಾರವನ್ನು ಒದಗಿಸಬೇಕೆಂದೂ, ನಡೆದ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂದೂ ಒತ್ತಾಯಿಸಲು ಸಿ.ಐ.ಟಿ.ಯು. ನೇತೃತ್ವದಲ್ಲಿ ಶಿಡ್ಲಘಟ್ಟದಲ್ಲಿ ಜುಲೈ 20ರಂದು ಭಾರಿ ಮೌನ ಮೆರವಣಿಗೆಯನ್ನು ತೆಗೆಯಲಾಯಿತು. ಆ ಮೇಲೆ ಬಹಿರಂಗಸಭೆ ನಡೆಸಲಾಯಿತು, ಸಭೆಯಲ್ಲಿ ಕಾಂ. ಎನ್. ಮಣಿ, ಜಿ. ದೊರೆಸ್ವಾಮಿ ಮೊದಲಾದವರು ಮಾತನಾಡಿದರು.

●

ಕೃಷಿ ಕೂಲಿಗಾರರ ಸಭೆ

ದ.ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟೇಶ್ವರ ಗ್ರಾಮದ ಹಳವಳ್ಳಿಯಲ್ಲಿ ಕಾಂ. ದಾಸ್‌ಭಂಡಾರಿಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ನೆರವಿನೊಂದಿಗೆ ಪ್ರಥಮ ಕೃಷಿ ಕೂಲಿಗಾರರ ಸಭೆಯು ತಾರೀಕು 17-7-80ರಂದು ನಡೆಯಿತು, ಮುಖ್ಯ ಅತಿಥಿಗಳಾಗಿ ಬಂದಿದ್ದ ಕಾಂ. ಅಬ್ರಹಾಂ ಕರ್ಕಡರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕೃಷಿಕೂಲಿಗಾರರ ಮುಂದಿರುವ ಸಮಸ್ಯೆಗಳು ಮತ್ತು ಇದರ ನಿವಾರಣೆಯಲ್ಲಿ ಸಂಘಟನೆಯ ಮಹತ್ವದ ಬಗ್ಗೆ ಒತ್ತಿ ಹೇಳಿದರು. ಸಮಾಜವಾದಿ ಸಮಾಜದ ನಿರ್ಮಾಣ ಒಂದೇ ಈ ನಿಟ್ಟಿನಲ್ಲಿ ನಾವು ನೀಡಬಹುದಾದ ಉತ್ತರವೆಂದರು. ಅಸ್ಸಾಂ, ತ್ರಿಪುರದಲ್ಲಿ ಕೋಮು ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ದೇಶದ ಐಕ್ಯತೆಗೆ ತಂದಿರುವ ಕುತ್ತನ್ನು ವಿವರಿಸುತ್ತಾ ಜನತೆ ಇಂತಹ ಶಕ್ತಿಗಳ ವಿರುದ್ಧ ಹೋರಾಡಬೇಕೆಂದು ಕರೆ ಇತ್ತರು.

ಸಭೆಯಲ್ಲಿ ಕೈಗೊಂಡ ಮಹತ್ವದ ನಿರ್ಣಯದಂತೆ ಕೃಷಿಕೂಲಿಗಾರರು ನಾಟಿ ಸಮಯದಲ್ಲಿ 2ಸೇರು ಅಕ್ಕಿ, ಕಳೆಕೀಳುವ ಸಂದರ್ಭದಲ್ಲಿ 1ಸೇರು ಅಕ್ಕಿ ಮತ್ತು ಕೊಯಿಲಿನ ಸಂದರ್ಭದಲ್ಲಿ ಕನಿಷ್ಠ 8ಸೇರು ಭತ್ತವನ್ನು ದಿನ ಕೂಲಿಯಾಗಿ ಪಡೆಯತಕ್ಕದ್ದು.

ಕೃಷಿಕೂಲಿಗಾರರ ಸಮಿತಿಯೊಂದನ್ನು ರಚಿಸಲಾಗಿ ಅದರ ಅಧ್ಯಕ್ಷರಾಗಿ ನೀಲು, ಕಾರ್ಯದರ್ಶಿಯಾಗಿ ಮರ್ಲಿ, ಜೊ. ಕಾರ್ಯದರ್ಶಿಯಾಗಿ ಪುಟಿಯಕ್ಕ, ಸಮಿತಿ ಸದಸ್ಯರಾಗಿ ಶ್ರೀಮತಿಯರಾದ ಕೊರತಿ, ನಾಗಿ, ಪುಟ್ಟಿಯಕ್ಕ, ಮುತ್ತಕ್ಕ, ಸಣ್ಣಮ್ಮ, ದೊಟ್ಟಕ್ಕ, ಅಬ್ಬಕ್ಕ ಇವರುಗಳನ್ನು ಆರಿಸಲಾಯಿತು.

ಸಭೆಗೆ ಸರ್ವರನ್ನು ಸ್ವಾಗತಿಸಿದವರು ಕಾಂ. ಗೋವಿಂದ ಶೆಟ್ಟಿಗಾರು. ಸಭೆಯಲ್ಲಿ ಡಿ.ವೈ.ಎಫ್. ಮುಖಂಡರಾದ ಕಾಂ. ಮಹಾಬಲದೇವಡಿಗರು ಹಾಜರಿದ್ದರು.

○

ನಿಧನ

ಮಂಗಳೂರಿನ ಉಳ್ಳಾಲದಲ್ಲಿ ವಾಸಿಸುತ್ತಿದ್ದ ಕಾಂ. ಲಕ್ಷ್ಮಿಯವರು 13-7-80ರಂದು ನಿಧನರಾದರು. 42 ವರ್ಷ ವಯಸ್ಸಿನ ಲಕ್ಷ್ಮಿ ಅವರು ಪಿಯರ್ಸ್ ಲೆಸ್ಲೀ ಕಂಪೆನಿಯ ಉದ್ಯೋಗಿಗಳಾಗಿದ್ದು ಅಲ್ಲಿಯ ಕಾರ್ಖಾನೆ ಶಾಖೆಯಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದರು. ಹಲವು ವರ್ಷಗಳಿಂದ ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಕಾಂ. ಲಕ್ಷ್ಮಿಯವರ ನಿಧನಕ್ಕೆ ಪಿಯರ್ಸ್ ಲೆಸ್ಲೀ ಕಂಪೆನಿಯ ಪಕ್ಷದ ಶಾಖೆಯು ಸಂತಾಪ ಸೂಚಿಸುತ್ತದೆ.

●

ಬೀಡಿ ಕಾರ್ಮಿಕರ ಸಭೆ

ದ.ಕ.ಜಿಲ್ಲೆ ಕುಂದಾಪುರ ತಾಲ್ಲೂಕು ಕೋಣಿಗ್ರಾಮದಲ್ಲಿ ಜುಲೈ 19 ರಂದು ಕಾಂ. ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಬೀಡಿ ಕಾರ್ಮಿಕರ ಸಭೆ ಸೇರಿ ಕಂಟ್ರಾಕ್ಟ್ ಪದ್ಧತಿಯನ್ನು ರದ್ದು ಮಾಡಬೇಕೆಂದು ಒತ್ತಾಯಿಸಲಾಯಿತು.

●

ಬೆಲೆ ಏರಿಕೆಯನ್ನು ವಿರೋಧಿಸಿ ಮಂಗಳೂರಲ್ಲಿ ಮತ ಪ್ರದರ್ಶನದ ನಿರ್ಧಾರ

ದಿನದಿಂದ ದಿನಕ್ಕೆ ನಿತ್ಯೋಪಯೋಗಿ ವಸ್ತುಗಳ ಬೆಲೆಯು ಏರುತ್ತಾ ಇದೆ. ಹಾಗೆಯೇ ನಗರದ ಹೋಟೆಲುಗಳಲ್ಲಿ ತಿಂಡಿ ಪಾನೀಯಗಳ ದರಗಳು ಅನಿರ್ಬಂಧಿತವಾಗಿ ಏರುತ್ತಿದೆ. ಇದನ್ನೆಲ್ಲಾ ತಾ.18-7-1980ರಂದು ಸಭೆ ಸೇರಿದ ದ.ಕ. ಕಾರ್ಮಿಕರ ಸಮನ್ವಯ ಸಮಿತಿಯು ಮನಗಂಡು ಇದನ್ನು ಪ್ರತಿಭಟಿಸಲು ತಾರೀಕು 8-8-1980ರಂದು ಜಿಲ್ಲಾಧಿಕಾರಿಯ ಕಛೇರಿಯ ಮುಂದೆ ಬೃಹತ್ ಮತಪ್ರದರ್ಶನವನ್ನು ನಡೆಸಿ ಅಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಲು ತೀರ್ಮಾನಿಸಲಾಗಿದೆ, ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಬಿ.ಎಮ್.ಎಸ್ ಮತ್ತು ಉಳಿದ ಟ್ರೇಡ್‌ಯೂನಿಯನ್‌ಗಳ ಪ್ರತಿನಿಧಿಗಳಿರುವ ಈ ಸಮಿತಿಯು ಬೆಲೆ ಏರಿಕೆಯ ಚಳವಳಿದ ಪ್ರಥಮ ಹೆಜ್ಜೆಯಾಗಿ ಈ ನಿರ್ಧಾರವನ್ನು ಕೈಕೊಂಡಿತು. ಮುಂದೆ ತೀವ್ರವಾದ ಚಳವಳವನ್ನು ನಡೆಸಲು ಬೇಕಾದ ಸಿದ್ಧತೆಯನ್ನು ಮಾಡಬೇಕೆಂದು ಈ ಸಮಿತಿಯು ಅಭಿಪ್ರಾಯಪಟ್ಟಿತು.

ತಾ. 18-8-80ಕ್ಕೆ ರಾಜ್ಯಾದ್ಯಂತ ನಡೆಯುವ ಸಾರ್ವತ್ರಿಕ ಮುಷ್ಕರದ ಬಗ್ಗೆ ಚರ್ಚಿಸಲಾಯಿತು. ಜಿಲ್ಲೆಯಲ್ಲಿ ಮುಷ್ಕರವನ್ನು ಯಶಸ್ವಿಗೊಳಿಸಲು ಬೇಕಾದ ಕಾರ್ಯಕ್ರಮ ಹಾಕಲು ಬೇಗನೆ ಸೇರಲು ನಿರ್ಧರಿಸಲಾಯಿತು.

ಸಿಟಿ ಬಸ್ಸು ದರಗಳ ಏರಿಕೆಯಿಂದ ಜನತೆಗಾದ ಅನ್ಯಾಯವನ್ನು ಮನಗಂಡು ಈ ದರವನ್ನು ಎಲ್ಲಾ ಹಂತಗಳಲ್ಲಿ ಕಡಿಮೆ ಮಾಡಬೇಕೆಂದು ಒತ್ತಾಯಿಸಿ, ಬಸ್ಸು ಮಾಲಕರು ಇನ್ನು ಮುಂದೆ ಏಕಪಕ್ಷೀಯವಾಗಿ ದರ ಏರಿಸದಂತೆ ನಿರ್ಬಂಧ ವಿಧಿಸಬೇಕೆಂದು ಸಭೆಯು ಸರಕಾರವನ್ನು ಒತ್ತಾಯಿಸಿದೆ. ○

"ಕನ್ನಡ ಉಳಿಸಲು" ತುಮಕೂರಿನ ಜನತೆಯ ಹೋರಾಟ

ದಿನಾಂಕ 19-7-80 ರಂದು ತುಮಕೂರು ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ಆಶ್ರಯದಲ್ಲಿ "ಕನ್ನಡ ಉಳಿಸಿ ಕಾರ್ಯಕ್ರಮ" ಯಶಸ್ವಿಯಾಗಿ ನಡೆಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಕ್ರಮಣ ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ ಪಾಟೀಲರು ವಹಿಸಿದ್ದರು. ಸಾವಿತ್ರಮ್ಮನವರ ಛತ್ರದಲ್ಲಿ ಏರ್ಪಟ್ಟಿದ್ದ ಈ ಕಾರ್ಯಕ್ರಮದಲ್ಲಿ ತುಮಕೂರಿನ ನಾಗರೀಕರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ವಿಚಾರಗೋಷ್ಠಿಯಲ್ಲಿ "ಸಂಸ್ಕೃತ ಕನ್ನಡದ ಬೆಳವಣಿಗೆಗೆ ಮಾರಕವಾಗಿದೆ" ಎಂಬ ವಿಷಯದ ಬಗ್ಗೆ ಮಾತನಾಡಿದ ಬರಗೂರು ರಾಮಚಂದ್ರಪ್ಪನವರು, ಪ್ರೌಢ ಶಿಕ್ಷಣದಲ್ಲಿ ಸಂಸ್ಕೃತಕ್ಕೆ ಪ್ರಥಮ ಸ್ಥಾನ ನೀಡಿದರೆ ಅದರಿಂದ ಕನ್ನಡಕ್ಕಾಗುವ ಧಕ್ಕೆಯನ್ನು ತುಂಬಾ ಸಮರ್ಥವಾಗಿ ಪ್ರತಿಪಾದಿಸಿದರು. "ಇಂಗ್ಲೀಷಿನಿಂದ ಕನ್ನಡದ ಬೆಳವಣಿಗೆಗೆ ಆಗುವ ತೊಂದರೆಗಳು" ಎಂಬ ವಿಷಯವಾಗಿ ಮಾತನಾಡಿದ ಲಿಂಗದೇವರು ಹಳೇಮನೆಯವರು ಕನ್ನಡ ಬಳಸದ ಅಧಿಕಾರಿಗಳನ್ನು ಶಿಕ್ಷಿಸುವಂತೆ ಕಾನೂನು ತರಲು ಒತ್ತಾಯಿಸಿದರು. ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ಹೆಚ್. ಜಿ ಸಣ್ಣಗುಡ್ಡಯ್ಯನವರು ಇಂದಿನ ಭಾಷಾ ಘರ್ಷಣೆಗಳಿಗೆ ಅಸಹನತೆಯೇ ಕಾರಣ ಎಂದು ಅಭಿಪ್ರಾಯಪಟ್ಟರು. ದೇವಯ್ಯ ಹರವೆಯವರು ಕನ್ನಡದ ಬೆಳವಣಿಗೆಗೆ ಅಗತ್ಯ ಪರಿಸರ ನಿರ್ಮಾಣ ಮಾಡುವ ಬಗ್ಗೆ ಭಾಷಣ ಮಾಡಿದರು. ಸಮುದಾಯದ ಟಿ. ಎಸ್. ಲೋಹಿತಾಶ್ವರವರು ಸಮಾರೋಪ ಭಾಷಣ ಮಾಡಿದರು, ಪ್ರಾರಂಭದಲ್ಲಿ ಧ್ರುವಕುಮಾರ್ ಸ್ವಾಗತಿಸಿದರು, ವಂದನಾರ್ಪಣೆ ಮಾಡಿದ ಸಿ. ಯತಿರಾಜು ಕನ್ನಡ ಉಳಿಸಲು ಹೋರಾಟ ಒಂದು ಜನಪರ ಹೋರಾಟ ಎಂದು ಅಭಿಪ್ರಾಯಪಟ್ಟು ಕನ್ನಡ ಜನರ ಭಾಷಾ ಅಭಿಮಾನ ಹೀನತೆಗೆ ದುಃಖಿಸಿದರು, ಕಾರ್ಯಕ್ರಮದ ಅಂತ್ಯದಲ್ಲಿ ದಲಿತ ಸಂಘರ್ಷ ಸಮಿತಿಯ ಕಲಾತಂಡದವರಿಂದ "ಕೇಶವಗಿರಿಯಪ್ಪನ ಕಗ್ಗೊಲೆ" ಎಂಬ ನಾಟಕವನ್ನು ಅಭಿನಯಿಸಲಾಯಿತು.

○

ಪೋಲೀಸ್ ದೌರ್ಜನ್ಯದ ವಿರುದ್ಧ ವಾರಾಚರಣೆಗೆ ಕರೆ

(1ನೇ ಪುಟದಿಂದ)

ಪ್ರಭುತ್ವ ಶಕ್ತಿಗಳನ್ನು ಬೆಳೆಸಲು ಶ್ರಮಿಸಲು ತನ್ನೆಲ್ಲಾ ಘಟಕಗಳಿಗೆ ರಾಜ್ಯ ಸಮಿತಿಯು ಕರೆ ಇತ್ತಿದೆ.

ಅಸ್ಸಾಂ ಚಳವಳಿಯ ನಿಜರೂಪ :

ಅಸ್ಸಾಂ ಚಳವಳಿ ಮತ್ತು ಈಶಾನ್ಯ ಭಾರತದಲ್ಲಿ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯನ್ನು ದೀರ್ಘವಾಗಿ ಚರ್ಚಿಸಿದ ಪಕ್ಷದ ರಾಜ್ಯ ಸಮಿತಿಯು "ಅಸ್ಸಾಂ ಚಳವಳಿಯು ಒಂದು ಪ್ರತ್ಯೇಕತಾ ಚಳವಳಿಯಾಗಿದೆ" ಎಂದು ಅಭಿಪ್ರಾಯಪಟ್ಟಿತು. ಪಕ್ಷದ ಕೇಂದ್ರ ಸಮಿತಿಯು ತೆಗೆದುಕೊಂಡ ನಿಲುವನ್ನು ಒಪ್ಪಿಕೊಂಡ ರಾಜ್ಯ ಸಮಿತಿಯು ಅಸ್ಸಾಂ ಚಳವಳಿಯ ನಿಜರೂಪವನ್ನು ರಾಜ್ಯದ ಜನತೆಗೆ ತಿಳಿಸುವುದು ಮತ್ತು ರಾಷ್ಟ್ರೀಯ ಸಮಗ್ರತೆಗೆ ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆ ಹಾಗೂ ರಾಷ್ಟ್ರದಾದ್ಯಂತ ದುಡಿಯುವ ಜನತೆಯ ವರ್ಗ ಐಕ್ಯತೆಗೆ ಧಕ್ಕೆ ತರುವ ಛಿದ್ರಕಾರಿ ಚಳವಳಿಯ ವಿರುದ್ಧ ಜನತೆಯನ್ನು ಸಂಘಟಿಸಲು ಮುಂದಾಗಲು ತನ್ನೆಲ್ಲಾ ಘಟಕಗಳಿಗೆ ರಾಜ್ಯ ಸಮಿತಿಯು ಕರೆ ಇತ್ತಿದೆ. ಆಗಸ್ಟ್ ಮಧ್ಯ ಭಾಗದಲ್ಲಿ ರಾಜ್ಯದ ಎಲ್ಲಾ ಕಡೆ, ಸ್ಥಳೀಯವಾಗಿ ಅನುಕೂಲವಾದ ದಿನಗಳಲ್ಲಿ, ಸಭೆ ಮತ್ತು ಚರ್ಚಾಕೂಟಗಳನ್ನು ನಡೆಸುವುದು ಹಾಗೂ ಕರಪತ್ರಗಳನ್ನು ಹಂಚುವುದರ ಮೂಲಕ ಅಸ್ಸಾಂ ಚಳವಳಿಯ ನಿಜರೂಪವನ್ನು ಜನತೆಗೆ ತಿಳಿಸುವ ಕಾರ್ಯಕ್ರಮ ಹಾಕಲು ರಾಜ್ಯ ಸಮಿತಿ ಕರೆ ಇತ್ತಿದೆ. "ಅಸ್ಸಾಂ ಚಳವಳಿಯ ನಿಜರೂಪ" ಎಂಬ ಪುಸ್ತಕವನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಜನತೆಯ ಮಧ್ಯೆ ಮಾರಾಟ ಮಾಡಲೂ ನಿರ್ಣಯಿಸಲಾಗಿದೆ.

ಸಂತಾಪ ಸೂಚನೆ :

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹಿರಿಯ ಮುಂದಾಳುಗಳಾದ ಕಾಂ. ಕುಂಞಂಬು (ಕೇರಳ) ಮತ್ತು ಲೋಕಸಭಾಸದಸ್ಯರಾಗಿದ್ದ ಕಾಂ. ದಿನೇನ್ ಭಟ್ಟಾಚಾರ್ಯ ಇವರ ನಿಧನದ ಬಗ್ಗೆ ಸಂತಾಪ ಸೂಚಿಸಿದ ರಾಜ್ಯಸಮಿತಿಯು ಇವರುಗಳು ಹಾಕಿಕೊಟ್ಟ ಆದರ್ಶವನ್ನು ಎತ್ತಿ ಹಿಡಿಯಲು ಪ್ರತಿಜ್ಞೆ ಮಾಡಿತು.

ರಾಜ್ಯದಾದ್ಯಂತ ಮುಷ್ಕರಕ್ಕೆ ಬೆಂಬಲ :

ರಾಜ್ಯ ಸರಕಾರವು ಜಾರಿಗೆ ತರಲು ಯೋಜಿಸಿರುವ ಅಗತ್ಯ ಸೇವಾ ಮಸೂದೆಯನ್ನು ಹಿಂತೆಗೆದುಕೊಳ್ಳಲು ಮತ್ತು ಕಾರ್ಮಿಕರ-ಮಾಲಕರ ವಿವಾದಗಳಲ್ಲಿ ಪೋಲೀಸರು ಮಾಲಕರ ಪರವಾಗಿ ಮಧ್ಯ ಪ್ರವೇಶ ಮಾಡುವುದನ್ನು ನಿಲ್ಲಿಸಲು ಒತ್ತಾಯಿಸಿ ಆಗಸ್ಟ್ 18 ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ಜುಲೈ 14ರಂದು ಬೆಂಗಳೂರಲ್ಲಿ ಜರುಗಿದ ಕಾರ್ಮಿಕ ಸಂಘಟನೆಗಳ ರಾಜ್ಯಮಟ್ಟದ ಸಮಾವೇಶವು ಕೊಟ್ಟ ಕರೆಯನ್ನು ಸಿ.ಪಿ.ಐ. (ಎಂ) ರಾಜ್ಯ ಸಮಿತಿಯು ಸಂಪೂರ್ಣ ಬೆಂಬಲಿಸಿದೆ. ರಾಜ್ಯವ್ಯಾಪಿ ಮುಷ್ಕರವನ್ನು ಯಶಸ್ವಿಗೊಳಿಸಲು ಸಹಕರಿಸಿ, ಸರಕಾರವು ಕರಾಳ ಶಾಸನವನ್ನು ಹಿಂತೆಗೆದುಕೊಳ್ಳುವಂತೆ ಮಾಡಲು ಶ್ರಮಿಸಲು ತನ್ನೆಲ್ಲಾ ಘಟಕಗಳಿಗೆ ರಾಜ್ಯಸಮಿತಿಯು ಕರೆ ಈಯುತ್ತದೆ.

ಹೋರಾಟಗಳಿಗೆ ಬೆಂಬಲ :

ಬೆಂಗಳೂರು ನಗರದಲ್ಲಿ ಹಲವಾರು ದಿನಗಳಿಂದ ನಡೆಯುತ್ತಿರುವ ಐ.ಟಿ.ಸಿ. ಕಾರ್ಮಿಕರ ಹೋರಾಟ, ಬೆಳಗಾವಿಯಲ್ಲಿ ನಡೆಯುತ್ತಿರುವ ಇಂಡಾಲ್ ಮತ್ತು ಪವರ್‌ಲೂಮ್ ಕಾರ್ಮಿಕರ ಹೋರಾಟ, ಮಲಪ್ರಭಾ ನೀರಾವರಿ ಪ್ರದೇಶದ ನರಗುಂದ ಮತ್ತಿತರೆಡೆಗಳ ರೈತರ ಹೋರಾಟ ಮೊದಲಾದವುಗಳಿಗೆ ಸಂಪೂರ್ಣ ಬೆಂಬಲವನ್ನಿತ್ತ ರಾಜ್ಯ ಸಮಿತಿಯು ಸರಕಾರವು ತಕ್ಷಣವೇ ಕಾರ್ಮಿಕರ ಮತ್ತು ಜನತೆಯ ಬೇಡಿಕೆಗಳನ್ನು ಈಡೇರಿಸಲು ಮುಂದಾಗಲು ಒತ್ತಾಯಿಸಿದೆ.

ರಾಜ್ಯಸಮಿತಿಯು ತೀರ್ಮಾನಗಳನ್ನು ಜಾರಿಗೊಳಿಸಿ, ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡಲೂ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ಶ್ರಮಿಸಲೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಕರೆ ಈಯುತ್ತದೆ.

○

ರಾಷ್ಟ್ರೀಯ ಐಕ್ಯತಾ ವಾರಾಚರಣೆಗೆ ಯುವಜನ ಸಂಘಟನೆ ಕರೆ

ಅಸ್ಸಾಂ ಚಳವಳಿಯ ಪ್ರತ್ಯೇಕತಾವಾದ ಸ್ವರೂಪದಿಂದ ಉದ್ಭವಿಸಿರುವ ಗಂಭೀರ ಸಮಸ್ಯೆ ಮತ್ತು ರಾಷ್ಟ್ರೀಯ ಸಮಗ್ರತೆಗೆ ಬಂದೊದಗಿರುವ ಧಕ್ಕೆಯನ್ನು ಜನತೆಗೆ ತಿಳಿಸಿ, ದುಡಿಯುವ ಜನತೆ ಮತ್ತು ವಿದ್ಯಾರ್ಥಿ ಹಾಗೂ ಯುವಜನತೆಯ ಐಕ್ಯತೆಯನ್ನು ಕಾಪಾಡುವುದು ಅವಶ್ಯವಾಗಿದೆ. ಪ್ರತಿಗಾಮಿ ಮತ್ತು ಸಂಕುಚಿತ ರಾಷ್ಟ್ರೀಯವಾದಿ ಶಕ್ತಿಗಳ ಪಿತೂರಿಯನ್ನು ಬಯಲು ಮಾಡಿ, ರಾಷ್ಟ್ರೀಯ ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಪ್ರಗತಿಶೀಲ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಆದ್ಯ ಕರ್ತವ್ಯವಾಗಿದೆ. ಇದಕ್ಕಾಗಿ ಆಗಸ್ಟ್ 7 ರಿಂದ 14ರ ತನಕ ರಾಷ್ಟ್ರದಾದ್ಯಂತ ರಾಷ್ಟ್ರೀಯ ಐಕ್ಯತಾ ಕಾರ್ಯಕ್ರಮವನ್ನು ನಡೆಸುವುದು ಮತ್ತು ಆಗಸ್ಟ್ 15 ರಂದು ರಾಷ್ಟ್ರೀಯ ಐಕ್ಯತಾ ದಿನವನ್ನು ನಡೆಸಲು ಡಿ. ವೈ. ಎಫ್., ಕೇಂದ್ರ ಸಂಘಟನಾ ಸಮಿತಿ ಕರೆ ಇತ್ತಿದೆ. ಕರ್ನಾಟಕ ರಾಜ್ಯದಲ್ಲೂ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಎಲ್ಲಾ ಘಟಕಗಳು ವಿದ್ಯಾರ್ಥಿ ಫೆಡರೇಷನ್ ಮತ್ತಿತರ ಪ್ರಗತಿಶೀಲ ಪ್ರಜಾಸತ್ತಾತ್ಮಕ ವಿದ್ಯಾರ್ಥಿ-ಯುವಜನ ಸಂಘಟನೆಗಳೊಡಗೂಡಿ ಈ ಕಾರ್ಯಾಚರಣೆಯನ್ನು ಆಚರಿಸಲು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯ ಸಂಘಟನಾ ಸಮಿತಿಯ ಸಂಚಾಲಕ ಕಾಂ. ಜಿ. ವಿ. ಶ್ರೀರಾಮ ರೆಡ್ಡಿ ಕರೆ ಇತ್ತಿದ್ದಾರೆ.

●

ಇನ್ನೂರೈವತ್ತು ಮಂದಿಯ ಬಂಧನ

(1ನೇ ಪುಟದಿಂದ)

ಯಲು ಕರೆಕೊಟ್ಟ ಮೇರೆಗೆ ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಯುವಜನರು ಬಂದು ಸೇರಿದ್ದರು. ಮೆರವಣಿಗೆ ತೆಗೆಯಲು ಸನ್ನಾಹ ನಡೆಯುತ್ತಿತ್ತು. ರಾಜ್ಯಪಾಲರು ಸಂಜೆ 4-30ಕ್ಕೆ ರಾಯಚೂರು ಬಿಟ್ಟರು. ಒಡನೆಯೇ ಪೋಲೀಸರು ಏನೇನೂ ಕಾರಣವಿಲ್ಲದೆ ಶಾಂತಯುತವಾಗಿದ್ದ ಮೆರವಣಿಗೆಕಾರರು ಮತ್ತು ಸುತ್ತಮುತ್ತಲಿದ್ದ ಜನರ ಮೇಲೆ ಅಮಾನುಷವಾದ ಧಾಳಿ ನಡೆಸಿದರು. ಲಾಠಿಚಾರ್ಜ್ ಮಾಡಿದ್ದಲ್ಲಿ ಅನೇಕರಿಗೆ ಗಾಯಗಳಾದುವು. ಸುಮಾರು 250ಕ್ಕಿಂತಲೂ ಹೆಚ್ಚಿಗೆ ಮಂದಿಯನ್ನು ಬಂಧಿಸಲಾಯ್ತು. ಬಂಧಿತರಾದವರಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಯಚೂರು ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ಚಂದ್ರಶೇಖರ ಬ್ಯಾಳಿ ಅವರೂ ಸೇರಿರುವರು.

ಈ ಸಮನ್ವಯ ಸಮಿತಿಯು ಬೆಲೆಏರಿಕೆ ವಿರುದ್ಧ ಪ್ರತಿಭಟಿಸಲು 23 ರಂದು ರಾಯಚೂರು ಬಂದಿಗೂ ಕರೆ ಇತ್ತಿತ್ತು. ಪೋಲೀಸರು ನಡೆಸಿದ ಲಾಠಿಚಾರ್ಜನ್ನು ಖಂಡಿಸಿದ ಸಿ ಪಿ ಐ (ಎಂ) ರಾಜ್ಯ ಸಮಿತಿ ಸೆಕ್ರೆಟಾರಿಯೇಟ್, ಕೂಡಲೇ ಬಂಧಿತರನ್ನೆಲ್ಲಾ ಬಿಡುಗಡೆ ಮಾಡುವಂತೆಯೂ, ಲಾರಿ ಚಾಲಕ ಮತ್ತು ಕ್ಲೀನರುಗಳಿಗೆ ನ್ಯಾಯ ಒದಗಿಸುವಂತೆಯೂ ಸರಕಾರವನ್ನು ಒತ್ತಾಯಿಸಿದೆ. ದಮನ ನೀತಿಯನ್ನು ಕೈಬಿಡದಿದ್ದಲ್ಲಿ ರಾಜ್ಯದಾದ್ಯಂತ ಹೋರಾಡುವ ಎಚ್ಚರಿಕೆಯನ್ನೂ ಕೊಡಲಾಗಿದೆ.

●

ಐ ಟಿ ಸಿ ಕಾರ್ಮಿಕರ ಮತ್ತು ಸಿ ಐ ಟಿ ಯು ಅಧ್ಯಕ್ಷ ಕಾಂ. ಸೂರಿಯವರ ಬಂಧನದ ಖಂಡನೆ

ಐ.ಟಿ.ಸಿ. ಕಾರ್ಮಿಕರ ಅಖಿಲ ಭಾರತ ಮಟ್ಟದ ಸಮಾವೇಶ ನಡೆದು, ಮುಕ್ತಾಯವಾಗುತ್ತಿದ್ದಂತೆಯೇ ಐ.ಟಿ.ಸಿ. ಕಾರ್ಮಿಕರ ಮೇಲೆ ಪೋಲೀಸು ಧಾಳಿ ಮತ್ತು ಕಾರ್ಮಿಕರನ್ನು ಬಂಧಿಸಿರುವುದಲ್ಲದೆ, 24ರಂದು ಸಂಜೆ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಮತ್ತು ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಎಸ್. ಸೂರ್ಯನಾರಾಯಣರಾವ್ ಅವರನ್ನು ಬಂಧಿಸಿರುವುದನ್ನು ಸಿ. ಪಿ. ಐ. (ಎಂ) ರಾಜ್ಯಸಮಿತಿ, ಬೆಂಗಳೂರು ಜಿಲ್ಲಾ ಸಮಿತಿಗಳು ಖಂಡಿಸಿವೆ. ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆಯೂ ಒತ್ತಾಯಿಸಲಾಗಿದೆ.

ಐ.ಟಿ.ಸಿ. ಕಾರ್ಮಿಕರ ವಿವಾದದ ಬಗ್ಗೆ ಹೈಕೋರ್ಟಿನ ತೀರ್ಮಾನವು ಕಾರ್ಮಿಕರ ಹಿತಗಳಿಗೆ ವಿರೋಧವಾಗಿದ್ದು, ನಮ್ಮ ಕಾನೂನು ಮತ್ತು ನ್ಯಾಯಾಲಯಗಳು ಯಾರ ಪರವಾಗಿವೆ ಎಂಬುದನ್ನು ತೋರಿಸುತ್ತವೆ ಎಂಬುದಾಗಿ ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ ಹೇಳಿಕೆ ಇತ್ತಿರುವರು.

ಸಂಪಾದಕೀಯ

(1ನೇ ಪುಟದಿಂದ)

ಗಳಿಗೂ, ಜೀವ ಮತ್ತು ಸ್ವತ್ತು ಹಾನಿಗಳಿಗೂ ರೈತರ ಸಮಸ್ಯೆಗಳನ್ನು ಪರಿಹರಿಸುವುವರಲ್ಲಿ ವಿಫಲವಾದ, ಜನಸಾಮಾನ್ಯರನ್ನು ಬಾಧಿಸುವ ಬೆಲೆಏರಿಕೆಯನ್ನು ತಡೆಗಟ್ಟಲು ಅಸಮರ್ಥವಾದ ಕೇಂದ್ರ ಮತ್ತು ರಾಜ್ಯಸರಕಾರಗಳೇ ಹೊಣೆಯಾಗಿವೆ.

ಬಂಧಿತರೆಲ್ಲರ ನಿಶ್ಶರ್ತ ಬಿಡುಗಡೆ, ರೈತರ ಬೇಡಿಕೆಗಳಿಗೆ ಮನ್ನಣೆ, ಬೆಲೆಏರಿಕೆಯನ್ನು ತಡೆಗಟ್ಟಲು ತುರ್ತುಕ್ರಮಗಳನ್ನು ಸರಕಾರವು ತಕ್ಷಣವೇ ವಹಿಸದಿದ್ದಲ್ಲಿ ಭುಗಿಲೆದ್ದಿರುವ ಅತೃಪ್ತಿ ರಾಜ್ಯವ್ಯಾಪಿಯಾಗುವುದು ಖಂಡಿತ. ಈ ಘಟನೆಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಯುವುದೂ ಅವಶ್ಯ. ಈ ಬೇಡಿಕೆಗಳ ಈಡೇರುವಿಕೆಗಾಗಿ ಮತ್ತು ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಹಾಗೂ ಪೋಲೀಸ್ ದೌರ್ಜನ್ಯದ ವಿರುದ್ಧ ರಾಜ್ಯದ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ಹೋರಾಡುವುದು ಅವಶ್ಯ.

●

ರೈತಸಂಘದ ಪ್ರಾಂತಮಂಡಳಿ ಸದಸ್ಯರ ಅವಗಾಹನೆಗೆ

ರೈತಸಂಘದ ಪ್ರಾಂತಮಂಡಳಿ (ಕೌನ್ಸಿಲ್) ತರಬೇತಿ ಶಾಲೆ ಮತ್ತು ಸಭೆಯು 1980 ಆಗಸ್ಟ್ ತಿಂಗಳ 12, 13 ಮತ್ತು 14 ರಂದು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ನಗರದ "ಡಿ-ಕ್ರಾಸಿನಲ್ಲಿರುವ" ಶ್ರೀ ಅಣ್ಣಪ್ಪಶೆಟ್ಟಿ ಛತ್ರದಲ್ಲಿ ನಡೆಯುವುದು. 12 ರಂದು ಬೆಳಿಗ್ಗೆ 11 ಗಂಟೆಗೆ ಸಭೆ ಪ್ರಾರಂಭವಾಗುವುದು. ಸದಸ್ಯರು ಮತ್ತು ಆಹ್ವಾನಿತರು 12ರಂದು ಬೆಳಿಗ್ಗೆ 10 ಗಂಟೆಯೊಳಗೆ ಬರಬೇಕು. ಬೆಂಗಳೂರು ಮತ್ತು ಕೋಲಾರ ಜಿಲ್ಲೆ ಕಡೆಯಿಂದ ಬರುವ ಬಸ್ಸುಗಳು ಡಿ-ಕ್ರಾಸಿನ ಮೂಲಕವೇ ಹೋಗುವವು. ತುಮಕೂರು ಜಿಲ್ಲೆ ಕಡೆಯಿಂದ ಬರುವವು ದೊಡ್ಡಬಳ್ಳಾಪುರ ಬಸ್ ನಿಲ್ದಾಣಕ್ಕೆ ಬರುವವು. ಮುಖ್ಯ ಬಸ್‌ನಿಲ್ದಾಣದಿಂದ 'ಡಿ-ಕ್ರಾಸ್' ಒಂದು ಕಿಲೋಮೀಟರು ದೂರದಲ್ಲಿದೆ.

ಬೆಂಗಳೂರು ರಾಜ್ಯ ರಸ್ತೆಸಾರಿಗೆ ಬಸ್‌ನಿಲ್ದಾಣದಿಂದ ಬೆಳಿಗ್ಗೆ 7 ಗಂಟೆ ಮೇಲೆ ದೊಡ್ಡಬಳ್ಳಾಪುರಕ್ಕೆ ಆಗಾಗ ಬಸ್ಸುಗಳಿವೆ. ಅಖಿಲ ಭಾರತ ಮುಖಂಡರುಗಳು ಈ ಸಭೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಸದಸ್ಯರು ಮತ್ತು ಆಹ್ವಾನಿತರು ತಪ್ಪದೇ ಭಾಗವಹಿಸಬೇಕಾಗಿ ವಿನಂತಿ.

ಕಾಂ. ಎಚ್. ಮುಗುವಾಳಪ್ಪ — ಅಧ್ಯಕ್ಷ
ಕಾಂ. ಪಿ. ರಾಮಚಂದ್ರರಾವ್ — ಪ್ರಧಾನಕಾರ್ಯದರ್ಶಿ
ಪ್ರಾಂತ ರೈತಸಂಘ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT